ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೩, ಆಗಸ್ಟ್ ೨೦೧೬

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಬೆಂಗಳೂರು ಪ್ರೆಸ್ – ೧೦೦ ವರ್ಷ ... ಪು. ೨

ಚಿಲುಮೆಯ ಒಳಗೆ

ರಾಂ ರಾಮ ... ಪು. ೬

ವಿಚಾರ ವಿಹಾರ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೯

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೧

ಡಿ.ಐ. ವೈ (ಅನುಭವ) ... ಪು. ೧೨

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೩

ಅಲ್ಲಲ್ಲಿ ಏನೇನು ... ಪು. ೧೩

ಬೆಂಗಳೂರು ಪ್ರೆಸ್ – ೧೦೦ ವರ್ಷ

ಪುಟ ೨

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಕನ್ನಡವೆನೆ ಕುಣಿದಾಡುವುದೆನ್ನೆದೆ, ಕನ್ನಡವೆನೆ ಕಿವಿ ನಿಮಿರುವುದು ಎಂಬ ರಸಋಷಿಯ ಮಾತನ್ನು ಕೇಳಿದಾಗ, ಮೈ ಪುಳಕಗೊಳ್ಳುವುದು ಪ್ರತಿಯೊಬ್ಬ ಕನ್ನಡಿಗನ ಗುಣವು. ಅಂತೆಯೇ, ರಸಋಷಿಯ ಇನ್ನೊಂದು ಉದ್ಗಾರವಾದ "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು" ಎಂಬುದು. ಭಾಷೆಯೊಂದಿಗಿನ ಇಂತಹ ಭಾವಕುಸುಮಗಳು ಅರಳಿದಾಗ ಸಿಗುವ ತೃಪ್ತಿಗೆ ಎಲ್ಲೆಯಿರುವುದಿಲ್ಲ.

ನಾವುಗಳು ಬೆಳೆಯುತ್ತ ನಮ್ಮ ಕಿವಿಗೆ ಬಿದ್ದ ಕನ್ನಡ ಪದಗಳು, ಕಥೆ, ಕಾವ್ಯ ಇತ್ಯಾದಿಗಳು ಅದೆಷ್ಟು ನಮ್ಮೊಳಗೆ ಒಂದಾಗಿಬಿಟ್ಟಿರುತ್ತದೆಯೆಂದರೆ, ಅದು ನಮ್ಮ ಉಸಿರೇ ಆಗಿರುತ್ತದೆ, ಅದು ನಮ್ಮನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ. ಇದಕ್ಕೆ ಮೂಲ ಕಾರಣವು, ಆ ಸಿರಿನುಡಿಗಳನ್ನು ನಾವು ಮತ್ತೆ ಮತ್ತೆ ಮನೆಮನೆಗಳಲ್ಲಿ, ಸಭೆ ಸಮಾರಂಭಗಳಲ್ಲಿ, ದಿನ ನಿತ್ಯದ ಮಾತುಗಳಲ್ಲಿ ಉಪಯೋಗಿಸುತ್ತ ಬಂದಿರುವುದರಿಂದ. ಭಾಷಾ ಪ್ರಯೋಗಗಳನ್ನು ಕಡಿಮೆ ಮಾಡಿದಂತೆಲ್ಲ ಸುಲಲಿತ ಪದಗಳೇ ಕ್ಲಿಷ್ಟ ಪದಗಳಾಗಿಬಿಡುವ ಸಂಭವವು ಇದೆ.

ಒಂದಷ್ಟು ವರ್ಷದ ಹಿಂದಿನ ನಮ್ಮ ಜೀವನಕ್ಕೆ ಹೋಗಿ ಅವಲೋಕಿಸಿದರೆ, ಅದೆಷ್ಟು ಕನ್ನಡ ಪದಗಳನ್ನು ದಿನನಿತ್ಯದಲ್ಲಿ, ಹಬ್ಬ ಹರಿದಿನಗಳಲ್ಲಿ, ಮನೆಗೆ ಬಂದವರ ಜೊತೆಗಿನ ಮಾತುಕತೆಯಲ್ಲಿ ಉಪಯೋಗಿಸುತ್ತಿದ್ದೆವು. ಅದು ಕ್ರಮೇಣ ಕಡಿಮೆಯಾಗತೊಡಗಿದೆ. "ಒಂದು ಲೋಟ ನೀರು" ಕೊಡಿ ಹೋಗಿ "ಒನ್ ಗ್ಲಾಸ್ ವಾಟರ್ ಪ್ಲೀಸ್" ಆಗಿಹೋಗಿದೆ. "ಹೇ, ಹೇಗಿದ್ದೀಯೋ" ಮರೆತುಹೋಗಿ "ಹೇಯ್ ಮ್ಯಾನ್, ಹೌ ಯು ಡುಯಿಂಗ್" ಬಂದು ಬಿಟ್ಟಿದೆ. ಇಷ್ಟು ಭಾಷಾ ದಾರಿದ್ರ್ಯತೆ ಬೇಕೇ ಎಂದು ಪ್ರಶ್ನಿಸಿಕೊಳ್ಳುವವರು ವಿರಳಾತಿ ವಿರಳರಾಗುತ್ತಿದ್ದೀವಿ. ಇದು ಎಚ್ಚರಿಕೆಯ ಘಂಟೆಯಾಗಬೇಕು ನಮಗೆ.

ಶ್ರಾವಣ ಮಾಸವೆಂದರೆ ಹಬ್ಬಗಳ ಸಾಲು. ಭಾಷಾ ಸಂಸ್ಕೃತಿಯ ತಿಳುವಳಿಕೆಗೆ ಸಕಾಲ. ಪೂಜೆಯು ವೈಯ್ಯಕ್ತಿಕ ನಿಜ. ಆದರೆ ಕಿವಿತೆರೆದು ಕೇಳುವುದು ಐಖ್ಯಿಕ. ಮನೆ ಮನೆಗಳಲ್ಲಿ ಮಾಡುವ ಹಬ್ಬಗಳಾಚರಣೆಯಲ್ಲಿ ಕನ್ನಡವನ್ನು ಬರಮಾಡಿಕೊಳ್ಳಿ. ಪ್ರತೀ ಹಬ್ಬಕ್ಕೂ ಅದೆಷ್ಟು ರಸವತ್ತಾದ ಹಾಡುಗಳನ್ನು ಹೆಣೆದಿದ್ದಾರೆ ಜಾನಪದರು, ದಾಸರುಗಳೆಲ್ಲರು. ಹಾಡಿಕೊಳ್ಳಲೇ ಬೇಕೆಂದಿಲ್ಲ. ಒಮ್ಮೆ ಓದಿಕೊಳ್ಳಿ, ಅಥವಾ ಧ್ವನಿಮುದ್ರಣವಾದ ಹಾಡನ್ನು ಕೇಳಿಸಿಕೊಳ್ಳಿ. ಯಾವ ಪದಗಳು ನಿಮಗೆ ಸುಲಭವಾಗಿ ಗ್ರಹಿಸಲು ಆಗಲಿಲ್ಲ ಎಂದು ಮನನ ಮಾಡಿ. ಸಾಧ್ಯವಾದರೆ ಕನ್ನಡದ ಹರಿಕಥೆ, ಸಂಗೀತಕಛೇರಿ ನಡೆಯುತ್ತಿದ್ದರೆ ಹೋಗಿ ಬನ್ನಿ. ಆಯಾ ಹಬ್ಬಗಳಿಗೆ ಕಥೆಗಳೂ ಇವೆ. ಅವನ್ನು ಸುಮ್ಮನೆ ಓದಿ. ಕನ್ನಡವನ್ನು ಹಬ್ಬಗಳ ಆಚರಣೆಯಲ್ಲಿ ಉಪಯೋಗಿಸುತ್ತ ಬಂದರೆ ಕನ್ನಡವೂ ನಮ್ಮೆಲ್ಲರ ಕಿವಿಗೆ ಬೀಳುತ್ತದೆ. ಹೀಗೆ ಕನ್ನಡ ಪದಗಳು ನಮಗೆ ಕೇಳಿಸುತ್ತ ಹೋದರೆ, ಕನ್ನಡದ ಶ್ರಾವಣವನ್ನು ಆಚರಿಸಿದಂತಾಗುತ್ತದೆ. ಒಮ್ಮೆ ಯೋಚಿಸಿ ... ▪

ಎರಡು ತಿಂಗಳ ಪ್ರಮುಖ ದಿನಗಳು

ಆಗಸ್ಟ್ ಶ್ರೀ ದುರ್ಮುಖಿ ನಾಮ ಸಂವತ್ಸರ, ದಕ್ಷಿಣಾಯಣ, ಗ್ರೀಷ್ಮ/ವರ್ಷ ಋತು, ಆಷಾಢ/ಶ್ರಾವಣ ಮಾಸ

02 ಮಂ – ಭೀಮನ ಅಮಾವಾಸ್ಯೆ 03 ಬು – ಶ್ರಾವಣ ಮಾಸ ಆರಂಭ
06 ಶ - ನಾಗರ ಚೌತಿ 07 ಭಾ - ನಾಗ/ಗರುಡ ಪಂಚಮಿ
09,16,23,30 ಮಂ - ಮಂಗಳ ಗೌರಿ ವ್ರತ
12 ಶು - ವರಮಹಾಲಕ್ಷ್ಮಿ ವ್ರತ 14 ಭಾ - ಪವಿತ್ರಾ ಏಕಾದಶಿ
15 ಸೋ - ಭಾರತ ಸ್ವಾತಂತ್ರ ದಿನ 17 ಬು - ಋಗ್ ಉಪಾಕರ್ಮ
18 ಗು – ಯಜುರ್ ಉಪಾಕರ್ಮ/ ನೂಲ ಹುಣ್ಣಿಮೆ
19 ಶು ಗಾಯತ್ರಿ ಪ್ರತಿಪತ್
20 ಶ - ಶ್ರೀ ರಾಘವೇಂದ್ರ ಸ್ವಾಮಿ ಆರಾಧನೆ
21 ಭಾ - ಸಂಕಷ್ಟ ಚತುರ್ಥಿ
25 ಗು - ಶ್ರೀಕೃಷ್ಣ ಜನ್ಮಾಷ್ಟಮಿ
28 ಭಾ - ಅಜಾ ಏಕಾದಶಿ

ಸೆಪ್ಟೆಂಬರ್ ಶ್ರೀ ದುರ್ಮುಖಿ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಗು - ಬೆನಕನ ಅಮಾವಾಸ್ಯೆ, 02 ಶು - ಭಾದ್ರಪದ ಮಾಸ ಆರಂಭ
04 ಭಾ - ಸ್ವರ್ಣ ಗೌರಿ ವ್ರತ, 05 ಸೋ - ಗಣೇಶ ಚತುರ್ಥಿ
06 ಮಂ - ಋಷಿ ಪಂಚಮಿ
09 ಶು – ರಾಧಾ ಜಯಂತಿ
12 ಸೋ – ಬಕ್ರೀದ್/ಝುಲ ಝಾಲನಿ ಏಕಾದಶಿ
15 ಮಂ – ಅನಂತ ಪದ್ಮನಾಭ ವ್ರತ/ಸರ್ ಎಂ ವಿ ಜನ್ಮ ದಿನ
16 ಶು – ಅನಂತನ ಹುಣ್ಣಿಮೆ
19 ಸೋ - ಸಂಕಷ್ಟ ಚತುರ್ಥಿ
17 ಶ - ಪಿತೃ ಪಕ್ಷ ಆರಂಭ
26 ಸೋ - ಇಂದಿರಾ ಏಕಾದಶಿ
30 ಶು – ಮಹಾಲಯ ಅಮಾವಾಸ್ಯೆ

ಬೆಂಗಳೂರು ಪ್ರೆಸ್ - ೧೦೦

ಕನಕಾಪುರ ನಾರಾಯಣ

ಭಾರತಕ್ಕೆ ಮುದ್ರಣ ಯಂತ್ರ ಮೊದಲು ತಂದದ್ದು ಕ್ರಿ ಶ1556 ರಲ್ಲಿ ಪೋರ್ಚುಗೀಸರು. ಈ ಯಂತ್ರವು ಇಡೀ ಕೋಣೆಯ ಗಾತ್ರದ್ದಾಗಿತ್ತು. ಇದನ್ನು ಬೈಬಲ್ ಮುದ್ರಣಕ್ಕಾಗೆಂದೇ ಭಾರತಕ್ಕೆ ತರಲಾಗಿತ್ತು. ಭಾರತೀಯರಿಗೆ ಇದನ್ನು ನೋಡಲು ಅವಕಾಶವಿತ್ತೇ ಹೊರತು ಮುಟ್ಟಲು ಇರಲಿಲ್ಲ. ಭಾರತೀಯರಿಗೂ ಮುದ್ರಣ ಯಂತ್ರವನ್ನು ತರಲು ಇದು ಪ್ರೇರಣೆ ಯಾಯಿತು. ದೇಶದ ಕೆಲವೆಡೆ ಮುದ್ರಣ ಯಂತ್ರಗಳು ಕೆಲಸ ಆರಂಭ ಮಾಡತೊಡಗಿದವು.



HOE'S SIX CYLINDER PRINTING PRESS.

ಟಿಪ್ಪು ಪ್ರಯತ್ನ

ಮೈಸೂರು ಸಂಸ್ಥಾನದ ಟಿಪ್ಪುಮುದ್ರಣ ಯಂತ್ರವನ್ನು ತರಲು ವಿವಿಧ ರಾಷ್ಟ್ರಗಳ ಸಂಪರ್ಕ ಬಳಸಿದರು, 1787ರಲ್ಲಿ ಫ್ರಾನ್ಸಿಗೆ ತಮ್ಮ ರಾಯಭಾರಿಗಳನ್ನೂ ಕಳುಹಿಸಿದರು. ತಮ್ಮ ಹೋರಾಟಕ್ಕೆ ಇದು ಶಕ್ತಿ ಕೊಡುವುದೆಂದೂ ಅವರು ಅರಿತಿದ್ದರು. ಆದರೆ ಟಿಪ್ಪು ಎಷ್ಟೇ ಗುಪ್ತವಾಗಿ ಪ್ರಯತ್ನ ನಡೆಸಿದರೂ ಬ್ರಿಟೀಷರು ಸದಾ ಅವರ ಮೇಲೆ ಹದ್ದಿನ ಕಣ್ಣಿಟ್ಟಿದ್ದರು, ತಿಪ್ಪುವಿನ ಪ್ರಯತ್ನ ವಿಫಲಗೊಂಡಿತು.1799 ರಲ್ಲಿ ಟಿಪ್ಪು ಆಂಗ್ಲ-ಮೈಸೂರು ಯುದ್ಧದಲ್ಲಿ ವೀರ ಮರಣ ಹೊಂದಿದ.ಮೈಸೂರು ಸಂಸ್ಥಾನವನ್ನು ಬ್ರಿಟೀಷರು ನಾಲ್ಕು ಭಾಗ ಮಾಡಿದರು.ಉತ್ತರ ಮತ್ತು ಈಶಾನ್ಯ ಭಾಗವನ್ನು ಮರಾಠರು ಮತ್ತು ನಿಜಾಮರಿಗೆ ನೀಡಿದರು. ಕರಾವಳಿ ಕಡಲ ತೀರವನ್ನು ಬ್ರೀಟೀಷರು ತಾವೇ ವಹಿಸಿಕೊಂಡರು, ಉಳಿದ ಒಂಭತ್ತು ಜಿಲ್ಲೆಗಳು ಮೈಸೂರು ಅರಸರಿಗೆ ನೀಡಲಾಯಿತು. ಅದರಲ್ಲೂ ಸೈನ್ಯದ ಪದ್ದತಿಯನ್ನು ಒಪ್ಪಿದ ಕಾರಣ ಸೈನಿಕ ಅಧಿಕಾರವಿಲ್ಲದೇ ಬರೇ ಆಡಳಿತ ಮತ್ತು ಸಾಂಸ್ಕೃತಿಕ ರಂಗಕ್ಕೆ ಮಾತ್ರ ಸೀಮಿತವಾಗಿತ್ತು. 1799 ಜೂನ್ 30ರಂದು ಅಧಿಕಾರಕ್ಕೆ ಬಂದಾಗ ಮುಮ್ಮಡಿ ಕೃಷ್ಣರಾಜ ಒಡೆಯರು ಬರೇ ಎರಡು ವರ್ಷದ ಮಗು. ಮಗು ವಯಸ್ಸಿಗೆ ಬರುವ ತನಕ ತಾಯಿ ಮತ್ತು ದೀವಾನ್ ಪೂರ್ಣಯ್ಯನವರೇ ಅಧಿಕಾರ ನಡೆಸಿಕೊಂಡು ಬಂದರು. ಪೂರ್ಣಯ್ಯನವರು ಟಿಪ್ಪುವಿನಕಾಲದಿಂದಲೂ ಇದ್ದುದರಿಂದ ಮುದ್ರಣ ಯಂತ್ರದ ಇತಿಹಾಸ ತಿಳಿದಿತ್ತು. ಮತ್ತೆ ಪ್ರಯತ್ನ ಮಾಡಿದರೂ ಬ್ರಿಟೀಷರು ಅವರ ಬಯಕೆಯನ್ನು ಚಿವುಟಿ ಹಾಕಿದರು. ಮೈಸೂರು ಸಂಸ್ಥಾನ ಮುಂದೆಂದು ಮುದ್ರಣ ಯಂತ್ರ ಹೊಂದಬಾರದು ಎನ್ನುವ ನಿಯಮ ಜಾರಿಗೆ ತಂದರು.

ಮೊದ ಮೊದಲ ಮುದ್ರಣಾಲಯಗಳು

ಈ ಮಧ್ಯೆ ಖಾಸಗಿ ಪ್ರಯತ್ನಗಳು ನಡೆಯುತ್ತಲೆ ಇದ್ದವು. 1840 ನವೆಂಬರ್ ಬೆಂಗಳೂರಿನ ಕಂಟೊನ್ಮೆಂಟಿನ ವೆಸ್ಲಿಯನ್ ಪ್ರೆಸ್ ರಾಜ್ಯದಲ್ಲಿ ಮೊದಲ ಮುದ್ರಣ ಯುಗಕ್ಕೆ ನಾಂದಿಯಾಯಿತು, Canarese and English Instructor ಇದು ಬೆಂಗಳೂರಿನಲ್ಲಿ ಮುದ್ರಣಗೊಂಡರೂ ಮದ್ರಾಸಿಗೆ ಬೈಂಡಿಂಗ್ ಮಾಡಲು ಕಳಿಸಬೇಕಾಯಿತು. ಕೊಲಂಬಿಯನ್ ಪ್ರೆಸ್ ಎರಡನೇ ಪ್ರೆಸ್ ಬೆಂಗಳೂರಿನಲ್ಲಿ ಆರಂಭಗೊಂಡದ್ದು.ಹತ್ತು ವರ್ಷಕ್ಕೆ ಬರೇ ಎಂಟು ಪುಸ್ತಕಗಳು ಪ್ರಕಟ ಗೊಂಡವು. ಮುಂದೆ ಅಚ್ಚುಮೊಳೆಯಲ್ಲಿ ಆದ ಕ್ರಾಂತಿಕಾರಿ ಬದಲಾವಣೆಯಿಂದ ಹೆಚ್ಚು ಪುಸ್ತಕಗಳು ಬಂದವು. 1862 ರಲ್ಲಿ ಹೊಳಕಲ್ ನರಸಿಂಹಯ್ಯನವರ "ವಿಚಾರ ದರ್ಪಣ ಪ್ರೆಸ್", 1872ರಲ್ಲಿ ವಿ.ಬಿ.ಸುಬ್ಬಯ್ಯನವರ "ಮೈಸೂರು ಡಿಪೋ ಪ್ರೆಸ್" ಆರಂಭವಾಯಿತು. ಎಮ್ ರುದ್ರಪ್ಪನವರ - ಚಾಮುಂಡೇಶ್ವರಿ ಪ್ರೆಸ್, ನಂತರ ವಾಗೀಶ್ವರಿ ಪ್ರೆಸ್,ತೌನ್ ಪ್ರೆಸ್, ವಾಜಪೇಯಂ ಗೋವಿಂದಯ್ಯ ಅವರ ಬೆಂಗಳೂರು ಬುಕ್ ಡಿಪೋ, ಕಾಕ್ಸ್ ಟೌನ್ ಪ್ರೆಸ್, ಫೀನಿಕ್ಸ್ ಪ್ರೆಸ್, ರಿಲಯನ್ಸ್ ಪ್ರೆಸ್, ವಿಜಯಲಕ್ಷ್ಮೀ ವಿಲಾಸ್ ಪ್ರೆಸ್, ಬಿ ಎಸ್ ಅಯ್ಯಂಗಾರ್ ಪ್ರೆಸ್ ಮೊದಲಾಗಿ ಸುಮಾರು 37 ಪ್ರೆಸ್ ಗಳು ಬೆಂಗಳೂರು ಮುದ್ರಣಾಲಯ ಸ್ಥಾಪನೆಗೆ ಮೊದಲೇ ಶುರುವಾಗಿದ್ದವು.

ಬ್ರಿಟೀಷರ ಪ್ರೆಸ್

ಆಗಿನ ಕಾಲದಲ್ಲಿ ಮುದ್ರಣಾಲಯ ಹೆಚ್ಚು ಲಾಭದಾಯಕ ವ್ಯಾಪಾರ / ಹುದ್ದೆ ಆಗಿರಲಿಲ್ಲ. ಹೆಚ್ಚು ಓದುಗರೂ ಇರಲಿಲ್ಲ ಏಕೆಂದರೆ ಪ್ರಾರ್ಥಮಿಕ ಶಾಲೆಗಳು ಆರಂಭವಾಗಿದ್ದೇ 1830 ರಲ್ಲಿ. ಅದರಲ್ಲೂ ಅಕ್ಷರಸ್ತರು ಕಡಿಮೆ. ಮೊದಮೊದಲು ಓಲೆಗರಿಗಳಲ್ಲಿದ್ದ ಆಧ್ಯಾತ್ಮಿಕ ಗ್ರಂಥಗಳನ್ನು,ರಾಮಾಯಣ ಮಹಾಭಾರತ,ಯೋಗ ವಸಿಷ್ಠ ವ್ರತಗಳು, ದೇವರ ನಾಮಗಳು ಹೆಚ್ಚಾಗಿ ಪ್ರಕಟ ಆಗುತ್ತಿತ್ತು.

ಮುಂದಿನ ಪುಟ ನೋಡಿ ...

ಹೀಗೆ ಖಾಸಗಿ ಪ್ರೆಸ್ ಗಳು ಬರುತ್ತಿದ್ದಂತೆ ಬ್ರಿಟೀಷ ಸರ್ಕಾರ ತನ್ನ ಆಡಳಿತಕ್ಕೆ ಅನುಕೂಲಕ್ಕಾಗಿ ಕ್ರಿ ಶ 1850 ರಲ್ಲಿ ಬೆಂಗಳೂರು ಕೋಟೆಯಲ್ಲಿರುವ ಟಿಪ್ಪು ಅರಮನೆಯಲ್ಲಿ ಅರಂಭಗೊಂಡು ಕೆಲವೇ ವರ್ಷಗಳಲ್ಲಿ, ನೃಪತುಂಗ ರಸ್ತೆಗೆ ಸ್ಥಳಾಂತರಗೊಂಡು,ಕ್ರಿ ಶ 1873ರಲ್ಲಿ ಕಬ್ಬನ್ ಪಾರ್ಕ್ ಬಳಿಗೆ ಬಂದಿತು. 130 ವರ್ಷ ಅಲ್ಲಿಯೇ ಕಾರ್ಯ ಮುಂದುವರೆಸಿ 1902ರಲ್ಲಿ ಕೆಂಗೇರಿ ಸಮೀಪಕ್ಕೆ ವರ್ಗಾಯಿಸಲಾಯಿತು.ಇಲ್ಲಿ ಕೈ ಚಾಲಿತ ಯಂತ್ರಗಳು ಮೊದಲು ಇದ್ದು ನಂತರ ಕಾಲಿನಿಂದ ಚಲಿಸುವ ಯಂತ್ರಗಳಾಗಿ ಆರಂಭಗೊಂಡವು.ಗ್ಯಾಸ್ ಚಾಲಿತ ಯಂತ್ರಗಳು ಬಂದವು. 1907ರ ವೇಳೆಗೆ ವಿದ್ಯುತ್ ಚಾಲಿತ ಯಂತ್ರಗಳು ಕೆಲಸ ಆರಂಭಿಸಿದವು.

ಚಾಮರಾಜ ಒಡೆಯರ ಸಾವು

1875-76 ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ತೀವ್ರ ಕ್ಷಾಮ ತಲೆದೂರಿತು.ಆಗ ಬ್ರಿಟೀಷ್ ಕಮಿಷನರೇ ಮೈಸೂರಿನ ಆಡಳಿತ ನಡೆಸುತ್ತಿತ್ತು. ಅಧಿಕಾರಿ ಆಗಿದ್ದ ಸಿ ಬಿ ಸ್ಯಾಂಡಲ್ ಕ್ಷಾಮದ ನಂತರ ಸಮಸ್ಯೆ ಎದುರಿಸಬೇಕಾಯಿತು, ಸ್ಥಳಿಯರ ಸಹಕಾರವಿಲ್ಲದೆ ಆಡಳಿತ ಕಷ್ಟವಾಯಿತು. ಜೆ ಡಿ ಗೋರ್ಡನ್ ನೂತನ ಕಮಿಷನರ್ ಆದರು, ಮುಂದೆ ರೆಸಿಡೆಂಟ್ ಆಗಿ ನೇಮಕವಾದರು. ನಂತರ 1881ರಲ್ಲಿ ಚಾಮರಾಜ ಒಡೆಯರು ಮೈಸೂರಿಗೆ ಅರಸರಾದರು. ಆದರೆ 24 ಒಪ್ಪಂದಕ್ಕೆ ಸಹಿ ಹಾಕಬೇಕಿತ್ತು. ಅದರಂತೆ ಸೈನ್ಯ, ಸಂಘಟನೆ,ರೈಲ್ವೆ, ಟೆಲಿಗ್ರಾಫ್, ನಾಣ್ಯ ಯಾವುದರ ಮೇಲೂ ಮೈಸೂರು ಸಂಸ್ಥಾನದ ಅಧಿಕಾರವಿರಲಿಲ್ಲ.ಚಾಮರಾಜ ಒಡೆಯರು 1894ರಲ್ಲಿ ಭಾರತ ಪ್ರವಾಸ ಮುಗಿಸಿ ಬಂದ ನಂತರ ಆಯಾಸದಿಂದ ಜ್ವರ, ನಂತರ ಡಿಫ್ತೀರಿಯಾಕ್ಕೆ ತಿರುಗಿ ಸಾವಿಗೀಡಾದರು. ಅವರಿಗಾಗ ಕೇವಲ 32 ರ ಪ್ರಾಯ. ಆಗ ಅವರ ಹಿರಿಯ ಮಗ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇನ್ನೂ ಹತ್ತು ವರ್ಷ.ಬಾಲಕನು ಸಂಪ್ರದಾಯವಾಗಿ ಅರಸನಾದರೂ ಚಟುವಟಿಕೆಗಳನ್ನು ದಿವಾನ್ ಶೇಷಾದ್ರಿ ಅಯ್ಯರ್ ನಡೆಸಿಕೊಂಡು ಬಂದರು.

"ರಾಜರ್ಷಿ" ಎನಿಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರು



ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಆರಂಭಿಕ ಶಿಕ್ಷಣ ಪಿ ರಾಘವೇಂದ್ರ ರಾಯರು ನೀಡಿದರು, ಕನ್ನಡ, ಇಂಗ್ಲೀಷ್, ಸಂಸ್ಕೃತ, ಪ್ರಭುತ್ವ ಪಡೆದು ಕುದುರೆ ಸವಾರಿ,ಭಾರತೀಯ ಪಾಶ್ಚಾತ್ಯ ಸಂಗೀತ ಪಾಂಡಿತ್ಯರಾದರು.1990ರಲ್ಲಿ ಕಾಥೇವಾಡದ ಅರಸ ವಿಜಯಸಿಂಹ ಅವರ ಪುತ್ರಿ ಪ್ರತಾಪ ಕುಮಾರಿಯ ಜೊತೆ ವಿವಾಹವಾಗುತ್ತದೆ.ಇದಕ್ಕಾಗಿ ಮದ್ರಾಸಿನ ಬ್ರಿಟೀಷ್ ಮುದ್ರಣಾಲಯದಲ್ಲಿ ಲಗ್ನ ಪತ್ರಿಕೆ ಅಚ್ಚುಮಾಡಿಸಲಾಯಿತು. ಆ ಕಾಲದಲ್ಲಿ ಎಂಟು ವರಹಗಳು ವೆಚ್ಚವೆಂದು ಪಾವತ್ ಮಾಡಲಾಯಿತು." ಈ ವೆಚ್ಚದಲ್ಲಿ ಸ್ವಂತ ಮುದ್ರಣಾಲಯವನೇ ಸಂಸ್ಥಾನವು ಹೊಂದಬಹುದು" ಎಂದು ಅರಸರು ಉದ್ಗಾರ ಎತ್ತಿದರು.ಮುಂದೆ ಮುದ್ರಣದ ವೆಚ್ಚ ಏರುತ್ತಾ ಹೋದಂತೆಲ್ಲಾ ಅರಸರಿಗೆ ಮುದ್ರಣಾಲದ ಕನಸು ಕಾಡುತ್ತಿತ್ತು.1911ರಲ್ಲಿ ಐದನೇ ಜಾರ್ಜ್ ದೊರೆಯ ದರ್ಬಾರಿಗೆ ಒಡೆಯರಿಗೆ ಆಹ್ವಾನ ಸಿಕ್ಕಿತು. ಮುದ್ರಣಯಂತ್ರದ ಮಾತುಕತೆಯೂ ನಡೆಯಿತು.ಪೂರಕ ಪ್ರತಿಕ್ರಿಯೆ ಕೂಡಾ ಸಿಕ್ಕಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತ ಸಾಹಿತ್ಯದ ಆರಾಧಕರು. ಅವರ ಕಾಲವನ್ನು "ಕರ್ನಾಟಕ ಸಂಗೀತದ ಉತ್ಕರ್ಷಣೆಯ ಯುಗ' ಎಂದು ಕರೆಯಲಾಗಿದೆ. ಸ್ವತಃ ಹದಿನೆಂಟು ಸಂಗೀತ ವಾದ್ಯ ಗಳನ್ನು ಅವರು ನುಡಿಸುತ್ತಿದ್ದರು.ಮೈಸೂರು ವಾಸುದೇವಾಚಾರ್ಯರು,ವೈಣಿಕ ಶಿಖಾಮಣಿ ಶೇಷಣ್ಣ, ಗಾನ ವಿಹಾರ ಬಿಡಾರಾಂ ಕೃಷ್ಣಪ್ಪ,ವೈಣಿಕ ಸುಬ್ಬಣ್ಣ, ಪಿಟೀಲು ಮಾಂತ್ರಿಕ ಚೌಡಯ್ಯ,ಚಿಂತನಪಲ್ಲಿ ವೆಂಕಟರಾವ್, ನೃತ್ಯ ಕಲಾವಿದರಾದ ತಿರುಮಕೂಡಲ ಸುಂದರಮ್ಮ,ಜಟ್ಟಿ ತಾಯಮ್ಮ,ಚಿತ್ರಕಾರ ವೆಂಕಟಪ್ಪನವರು ಒಡೆಯರ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಸ್ವತಃ ಬರಹಗಾರರೂ ಆಗಿದ್ದ ಅರಸರಿಗೆ ಮುದ್ರಣದ ಅವಶ್ಯಕತೆ ಬಹಳ ಕಾಡುತ್ತಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರು ಸಂಸ್ಥಾನದ ಪ್ರಗತಿಗೆ ಪೂರವಾದ ದಕ್ಷರೂ ಪ್ರಾಮಾಣಿಕರೂ ದೀವಾನರನ್ನೂ ನೇಮಿಸಿದರು.ಪಿ ಎನ್ ಕೃಷ್ಣಮೂರ್ತಿ,ವಿ ಪಿ ಮಾಧವರಾಯರು, ಟಿ ಆನಂದ ರಾಯರು, ಸರ್ ಎಂ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಇವರಲ್ಲಿ ಪ್ರಮುಖರು.ಪ್ರತಿನಿತ್ಯವೂ ಸಾಮಾನ್ಯ ನೌಕರರಂತೆ ಕಚೇರಿಗೆ ಹಾಜರಾಗಿ ಎಲ್ಲರಿಗೂ ನಿಷ್ಟೆ ಕಾರ್ಯಾಸಕ್ತೆ ಹೆಚ್ಚಾಯಿತು.ಶಾಸನ ಸಭೆ ನೇಮಕವಾಯಿತು,ನಂತರ ದ್ವಿಸದನ ಸಭೆಯಾಯಿತು.ಸರ್ವತೋಮುಖ ಪ್ರಗತಿಗೆ ನಾಂದಿಯಾಯಿತು.ಪ್ರಗತಿಯನ್ನು ಕಂಡ ಮಹಾತ್ಮ ಗಾಂಧಿ ಒಡೆಯರನ್ನು "ರಾಜರ್ಷಿ" ಎಂದು ಕರೆದರು. ಬ್ರಿಟೀಷ್ ಅಧಿಕಾರಿಗಳಾದ ಪಾಲ್ ಬ್ಯೂನ್ಟನ್, ಅಮೇರಿಕಾದ ಜಾನ್ ಗುಂಥರ್ ಮುಕ್ತ ಕಂಠದಿಂದ ಶ್ಲಾಘಿಸಿದರು.

ಮುಂದಿನ ಪುಟ ನೋಡಿ ...

ಮೈಸೂರಿನ ದೀವಾನರಾಗಿ ಟಿ ಆನಂದ ರಾಯರು 1912ರಲ್ಲಿ ನಿವೃತ್ತರದರು. ನಂತರ ಸ್ಂಸ್ಥಾನದ ಮುಖ್ಯ ಇಂಜಿನಿಯರ್ ಆಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾದರು.ಶಿಸ್ತಿನ ಸಿಪಾಯಿ ದಕ್ಷತೆಯ ಮೂರ್ತಿಯೂ ಆದ ಸರ್ ಎಂ ವಿ ಜನಿಸಿದ್ದು 1880 ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ.ಬಡತನದ ಬಾಲ್ಯ, ಸೆಂಟ್ರಲ್ ಕಾಲೇಜಿನಲ್ಲಿ ಬಿ ಎ ಪದವಿ ನಂತರ ಪುಣೆಯಲ್ಲಿ ತಾಂತ್ರಿಕ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಉನ್ನತ ಶ್ರೇಣಿಯಲ್ಲಿ ಮುಗಿಸಿ,ಮುಂಬೈ, ಸಿಂಧ್ ಪ್ರಾಂತ್ಯ, ಜಪಾನ್ ಚೀನಾ,ಈಜಿಪ್ಟ್, ಕೆನಡಾ, ಅಮೆರಿಕಾ, ರಷ್ಯಾ ಪ್ರವಾಸ ಮಾದಿ ಅಪಾರ ಅನುಭವ ಪಡೆದರು. 1913ರಲ್ಲಿ ಪ್ರತ್ಯೇಕ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಸ್ಥಾಪಿಸಿದರು.ಅದೇ ವರ್ಷದಲ್ಲಿ ಕೈಗಾರಿಕಾ ಸಾಲನೀತಿಯನ್ನೂ ಜಾರಿಗೊಳಿಸಿದರು.ಜನರಿಗೆ ಅಗತ್ಯವಾದ ಕಾಗದ, ಔಷಧಿ, ಬಟ್ಟೆ, ಗಾಜು, ಪೆನ್ಸಿಲ್, ಸಿಮೆಂಟ್, ಎಣ್ಣೆ,ಬೆಲ್ಲ, ಸಕ್ಕರೆ ಇವುಗಳ ಉತ್ಪಾದನೆಗೆ ಮಹತ್ವ ನೀಡಿದರು. 1916 ರಲ್ಲಿ ಗಂಧದ ಎಣ್ಣೆ, 1915 ರಲ್ಲಿ ಕೃಷ್ಣರಾಜೇಂದ್ರ ಬಟ್ಟೆ ಗಿರಣಿ,1918 ರಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, 1916 ಛೇಂಬರ್ ಆಫ್ ಕಾಮರ್ಸ್ ಆರಂಭ ಮಾಡಿದರು.

1914 ನಾಲ್ವಡಿ ಕೃಷ್ಣರಾಜರ ಜೊತೆ ಸರ್ ಎಂ ವಿ ಕೂಡಾ ಲಂಡನ್ ಪ್ರವಾಸ ಕೈಗೊಂಡರು. ಚಕ್ರವರ್ತಿ ಐದನೇ ಜಾರ್ಜ್ ಜೊತೆ ವಿಶೇಷ ಮಾತುಕತೆ ನಡೆಯಿತು. ಸ್ವಯಂ ಆಡಳಿತಕ್ಕೂ ಹಸಿರು ಬಾವುಟ ಸಿಕ್ಕಿತು, ಇದರಿಂದ ಮುದ್ರಣಾಲಯಕ್ಕಿದ್ದ ಅಡ್ಡಿ ದೂರವಾಯಿತು.ಆದರೆ ಈ ಯೋಜನೆ ಆದಾಯಪೂರಕವೇನೂ ಆಗಿರಲಿಲ್ಲ. ಸಂಸ್ಥಾನಕ್ಕೆ ಆರ್ಥಿಕ ಚೈತನ್ಯವೂ ಇರಲಿಲ್ಲ.ಅದೇ ಸಮಯದಲ್ಲಿ ಮೊದಲನೆ ಮಹಾಯುದ್ಧದ ಸಮಯ ಬ್ರಿಟೀಷರಿಗೆ ಆ ಕಡೆ ಹೆಚ್ಚು ನಿಗಾ ಇತ್ತು. ಇದರಿಂದ ಸರ್ ಎಮ್ ವಿ ನಿರಾಶರಾಗಲಿಲ್ಲ, ಗಣ್ಯರ ನೆರವು ಪಡೆದರು, ಅವರೂ ಸ್ಪಂದಿಸಿದರು.1915 ರಲ್ಲಿ ಕನಸು ನನಸಾಯಿತು. ಸರ್ ಎಂ ವಿ ಹದಿನೆಂಟು ಮಂದಿಯ ಗಣ್ಯರ ಮಂಡಳಿ ರಚಿಸಿದರು. ಸೆಪ್ಟೆಂಬರ್ 5 ರಂದು ಶ್ರೀ ಕಾರಣಿಕ ಕೃಷ್ಣಮೂರ್ತಿಯವರ ಮನೆಯಲ್ಲಿ ನಡೆದ ಸಭೆಯಲ್ಲಿ "ಬೆಂಗಳೂರು ಮುದ್ರಣಾಲಯ" ಕುರಿತು ನಿರ್ಧಾರ ತೆಗೆದುಕೊಂಡರು. ರಾವ್ ಬಹದ್ದೂರ್, ಸರ್ ಕೆ ಪಿ ಪುಟ್ಟಣ್ಣ ಚೆಟ್ಟಿ, ಶ್ರೀ ಚಂಗಯ್ಯ ರೆಡ್ಡಿ, ಡಾ ಪಿ ಎಸ್ ಅಚ್ಚುತ ರಾವ್, ಬಹದ್ದೂರ್ ಶಂಕರ ರಾವ್, ಶ್ರೀ ಸುಬ್ರಹ್ಮಣ್ಯ ಅಯ್ಯರ್, ಶ್ರೀ ಬಿ ಕೆ ಗರುಡಾಚಾರ್, ಶ್ರೀ ಕಾರಣಿಕ ಕೃಷ್ಣಮೂರ್ತಿ,ಶ್ರೀ ಸುಬ್ರಹ್ಮಣ್ಯ ಅಯ್ಯಂಗಾರ್,ಶ್ರೀ ವಿ ಎಸ್ ಸಂಜೀವ ರಾವ್, ಶ್ರೀ ಹಯವದನ ರಾವ್ ಈ ಸಭೆಯಲ್ಲಿ ಭಾಗವಹಿಸಿದ್ದ ಬಹು ಮುಖ್ಯಸ್ಥರು.ಸಂಸ್ಥಾಪಕ ಸರ್ ಕೆ ಪಿ ಪುಟ್ಟಣ್ಣ ಚೆಟ್ಟಿ ಚೇರ್ಮನ್ ಆಗಿ ಅಧಿಕಾರ ವಹಿಸಿಕೊಂಡರು.ಹದಿಮೂರು ಸಾವಿರ ಬಂಡವಾಳದೊಂದಿಗೆ ಕಂಪನಿ ಆರಂಭವಾಯಿತು.1916 ರಲ್ಲಿ "ದಿ ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ" ಆರಂಭವಾಯಿತು ಬಹುಬೇಗ ಎಲ್ಲೆಡೆ ‘‘ಬೆಂಗಳೂರು ಪ್ರೆಸ್’’ ಎಂದು ವಾಡಿಕೆಯಾಯಿತು.ಸ್ಟೇಟ್ ಬ್ಯಾಂಕ್ ಆವರಣದಲ್ಲೇ "ಬೆಂಗಳೂರು ಮುದ್ರಾಣಾಲಯ" ಕೂಡಾ ಆರಂಭವಾಯಿತು.ಯಸಸ್ವಿಯಾಗಿ ಬೇರೆ ಜಿಲ್ಲೆಗಳಲ್ಲೂ ಶಾಖೆಗಳು ಆರಂಭವಾಯಿತು.ಆಗಿನ ಮೈಸೂರಿನ ರೆಸಿಡೆಂಟ್ ಆಗಿದ್ದ ಹ್ಯಾಡಲಿ ಸರ್ ಎಂ ವಿ ಜೊತೆ ಒಳ್ಳೆಯ ಸಂಬಂಧ ಇತ್ತು. ಆದರೆ ಅವರ ನಂತರ ಬಂದ ಎಚ್ ಎ ಕಾಬ್ ರಾಜಕೀಯ ಪಿತೂರಿ ನಡೆಸಿದ್ದರು, ಇದರಿಂದ ಅಸಮಧಾನಗೊಂಡ ಸರ್ ಎಂ ವಿ 1919ರಲ್ಲಿ ನಿವೃತ್ತರಾದರು. ನಂತರ "ಬೆಂಗಳೂರು ಮುದ್ರಾಣಾಲಯದ ಸಲಹೆಗಾರರಾಗಿ ಕಾರ್ಯ ನಿರ್ವಹಿಸತೊಡಗಿದರು.

1921ಕ್ಯಾಲೆಂಡರ್ಗಳು ಪ್ರಕಟಗೊಂಡವು 1936ರಲ್ಲಿ ಕನ್ನಡ ಕ್ಯಾಲೆಂಡರ್ ಪ್ರಕಟಗೊಂಡು ಜನಪ್ರಿಯತೆ ಕಂಡಿತು. ಇಂದಿಗೂ ಅಷ್ಟೇ ಜನಪ್ರಿಯತೆ ಉಳಿಸಿಕೊಂಡು ಬಂದಿದೆ. ಕ್ಯಾಲೆಂಡರ್ಗಳ ಮೇಲೆ ಮೊದಲೆರೆಡು ದಶಕಗಳು ರಾಜ ಮನೆತನಕ್ಕೆ ಸೇರಿದವರ ಅರಸರ ಭಾವ ಚಿತ್ರಗಳನ್ನು ಗೌರವ ಪೂರ್ಣವಾಗಿ ಮುದ್ರಿಸಲಾಗುತ್ತಿತ್ತು. ನಂತರ ಗಾಂಧಿ,ನೆಹರು,ಪಟೇಲ್ ಚಿತ್ರಗಳು ಕಂಡವು.

ಮುಂದಿನ ಪುಟ ನೋಡಿ ...

1960 ರಲ್ಲಿ ಮುದ್ರಣದಲ್ಲಿ ಕ್ರಾಂತಿಕಾರಿ ಬದಲಾವಣೆ ಆಗಿ, ಕ್ಯಾಲೆಂಡರ್ ವಿನ್ಯಾಸವೂ ಬದಲಾಯಿತು, 1988ರಲ್ಲಿ ಟೇಬಲ್ ಕ್ಯಾಲೆಂಡರ್ 2000ಕ್ಕೆ ಕಂಪ್ಯೂಟರ್ ಮತ್ತು ಈಗ ಮೊಬೈಲ್ ನಲ್ಲೂ ಅಳವಡಿಸಬಹುದಾದ ಕ್ಯಾಲೆಂಡರ್ ಈ ಸಂಸ್ಥೆ ರೂಪಿಸಿದ್ದು ಕಾಲದ ಓಟದ ಜೊತೆಗೂ ಸಾಗುತ್ತಾ ನಡೆದಿದೆ.

ಶುಭಾಶಯ ...

1916ರಲ್ಲಿ ಮುದ್ರಣಾಲಯ ಅಲ್ಲದೆ ಇನ್ನೂ ಕೆಲವು ಸಂಸ್ಥೆಗಳಿಗೆ ನೂರರ ಸಂಭ್ರಮ ನಡೆಯಲಿದೆ. ಇವೆಲ್ಲಕ್ಕೂ ಮುಖ್ಯ ರೂವಾರಿಯು ವಿಶ್ವೇಶ್ವರಯ್ಯನವರೇ ಎನ್ನುವುದು ಮತ್ತೊಂದು ಹೆಮ್ಮೆಯ ವಿಷಯ. 1913ರಲ್ಲಿ ಸ್ಟೇಟ್ ಬಾಂಕ್ ಆಫ್ ಮೈಸೂರು, 1916ರಲ್ಲಿ ಕರ್ನಾಟಕ ಸಾಬೂನು ಕಾರ್ಖಾನೆ (KS & DL), 1915 ರಲ್ಲಿ ಆರಂಭವವಾಯಿತು ಕನ್ನಡ ಸಾಹಿತ್ಯ ಪರಿಷತ್ , 1923 ರಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, 1924 ರಲ್ಲಿ ಕೆ.ಆರ್.ಎಸ್ ಆಣೆಕಟ್ಟು ಇನ್ನೂ ಅನೇಕ.

ಬದಲಾವಣೆಗಳು ಆವಿಷ್ಕಾರಗಳು ಅಗತ್ಯ, ಅದರಿಂದ ನೂರಾರು ವರ್ಷಗಳಿಂದ ನಡೆದುಬಂದ ಹುದ್ದೆ ಶ್ರಮಗಳು ವ್ಯರ್ಥವಾಗಬಾರದು. ಮೈಸೂರಿಗೆ ಮುದ್ರಣಯಂತ್ರ ತರಲು ಅದೆಷ್ಟು ಅಡ್ಡಿ ಅಡಚಣೆಗಳು, ಆರ್ಥಿಕ ಬಿಕ್ಕಟ್ಟು ಇದ್ದವು, ಇವುಗಳ ಮಧ್ಯೆ ಎಂಥೆಂಥಾ ಗಣ್ಯರು ಹೆಗಲು, ಸಮಯ ಕೊಟ್ಟು, ಕಟ್ಟಿ ಬೆಳೆಸಿದ ಸಂಸ್ಥೆ ಇನ್ನೂ ನಡೆದುಕೊಂಡು ಬಂದಿದೆ ಎಂದರೆ ಶ್ಲಾಘನೀಯ ಅಲ್ಲವೇ. ಟಿಪ್ಪು, ಮೈಸೂರ ಅರಸರು ಹಾಗೂ ಸರ್ ಎಂ ವಿ ಅವರಿಂದ ಹಿಡಿದು ಇಲ್ಲಿಯವರೆಗೂ ಅಷ್ಟೇ ಖ್ಯಾತಿಯನ್ನು ಉಳಿಸಿಕೊಂಡು ಬಂದಿರುವ ಎಲ್ಲ ಗಣ್ಯರಿಗೂ ಹೃದಯಪೂರ್ವಕ ಅಭಿನಂದನೆಗಳು ಹಾಗೂ ಬೆಂಗಳೂರು ಪ್ರೆಸ್ ಗೆ ನೂರು ವರ್ಷದ ಹುಟ್ಟು ಹಬ್ಬದ ಶುಭಾಶಯಗಳು. ▪

(ಈ ಲೇಖನವು ಮಲ್ಲಿಗೆ ದಿನಚರಿ ಮತ್ತು ಅಂತರ್ಜಾಲ ಮಾಹಿತಿಗಳ ಸಂಗ್ರಹ)

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್‌ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ
ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಶ್ರೀಕಪ್ಪುಲಕ್ಷ್ಮೀ ವ್ರತಕಥಾನಕವು

ಸೀನು ವರಮಹಾಲಕ್ಷ್ಮೀವ್ರತಕ್ಕೆ ಖರೀದಿಸಬೇಕಾದ ಸಾಮಾನುಗಳ ಪಟ್ಟಿ ಮಾಡುತ್ತಾ ಕುಳಿತಿದ್ದ.

"ಭಜ ಬ್ಲ್ಯಾಕ್ ಲಕ್ಷ್ಮಿಂ; ಭಜ ಟ್ಯಾಕ್ಸ್‌ರಹಿತಾಂ
ಖಳವಿತ್ತಂ ಭಜ ಮೂಢಮತೇ।
sum ಪ್ರಾಪ್ತೇ ಅನ್ಯಪಥೇ ಅಧಿಕಂ
ನಹಿ ನಹಿ ಸ್ಥಾಪ್ಯತೇ ಬ್ಯಾಂಕಿಂಗ್ ಕ್ಷೇತ್ರೇ ॥"

ಎನ್ನುತ್ತಾ ಟೀಕಾಚಾರ್ಯರು ಒಳಬಂದರು.

"ಅಭಿವಾದಯೇ ಗುರುಗಳೆ. ಏನೀ ಹೊಸ ಮಂತ್ರ?"

"ಹೆಂಡತಿಗೆ ವರಮಹಾಲಕ್ಷ್ಮಿವ್ರತಕ್ಕೆ ಅಗತ್ಯವಾದುದೆಲ್ಲ ಕೊಡಿಸದಿದ್ದರೆ ಗಂಡನಿದ್ದರೂ ವೃಥಾ"

"ನಿಜ"

"ಆದ್ದರಿಂದ ಆ ವ್ರತಕ್ಕೆ ಪೂರಕವಾದುದೂ, ಈಗಿನ ಕಾಲಕ್ಕೆ ಅಗತ್ಯವಾದದ್ದೂ ಆದ ಕೃಷ್ಣಲಕ್ಷ್ಮೀವ್ರತದ ಬಗ್ಗೆ ಮೊದಲ ಸ್ವಾನ್ಹಾ ಅದು"

"ಅರ್ಥ?"

"ಕಪ್ಪುಹಣವನ್ನು ಧ್ಯಾನಿಸು; ತೆರಿಗೆ ರಹಿತವದು; ಕಾಳಸಂತೆಯ ಹಣವನ್ನು ಧ್ಯಾನಿಸೈ ಮೂಢಮತಿ; ಹಣವು ಅನ್ಯ ಮಾರ್ಗದಿಂದ ಬಂದಾಗ ಯಾವುದೇ ಬ್ಯಾಂಕಿನಲ್ಲಿ ಇಡುವುದು ತರವಲ್ಲ ಅಂತ ಅರ್ಥ ಕಣಯ್ಯ. ಆ ಲಕ್ಷ್ಮಿ ಇದ್ದರೇನೇ ಈ ವರಮಹಾಲಕ್ಷ್ಮಿಗೆ ವಿಶೇಷ ಕಳೆ" ಎಂದರು ಟೀಕಾಚಾರ್ಯರು.

"ಗುರುಗಳೆ, ಇದೆಂತಹ ವ್ರತವು? ಇದರ ಉಗಮ ಯಾವುದು? ಇದನ್ನು ಯಾರು ಯಾರು ಮಾಡಿ ಏನೇನು ಫಲ ಪಡೆದಿದ್ದಾರೆ? ಈ ವ್ರತದ ರೀತಿರಿವಾಜುಗಳು ಏನು?" ಎಂದು ಕೈಯಲ್ಲಿದ್ದ ಮೊಬೈಲನ್ನೂ ಸ್ವಿಚಾಫ್ ಮಾಡಿ ವ್ರತಮಹಾತ್ಮೆ ಅರಿಯಲು ಪೋಕೆಮಾನ್ ಮೂಡಿದ ಸ್ಕ್ರೀನನ್ನು ಕಾಣಲು ಪಡ್ಡೆ ಹುಡುಗ ತೋರುವ ಕಾತರದಷ್ಟೇ ಕಾತರವನ್ನು ಕಣ್ಣಲ್ಲಿ ಹೊತ್ತು ಕುಳಿತ ಸೀನು.

"ಎಲ್ಕೈ, ಸರ್ಕಾರದಲ್ಲಿದ್ದೂ ಇನ್ನೂ ಪ್ರಾಚೀನ ಕಾಲದವರಂತೆ ಸಂಬಳಕ್ಕಾತುಕುಳಿತ ಪ್ರಾಣಿಯೆ, ಕೇಳ್. ಪೂರ್ವದಲ್ಲಿ.... ಕ್ಷಮಿಸು... ಪಶ್ಚಿಮದಲ್ಲಿ ಸ್ವಿಸ್ ಬ್ಯಾಂಕಮ್ಮ ಎಂಬ ಒಬ್ಬ ಮಹಾನ್ ದೇವಿ ಇರುವಳು. ಭಾರತಕ್ಕೆ ಸ್ವಾತಂತ್ರ್ಯ, ಅದನ್ನು ಆಳುವವರಿಗೆ ಸ್ವೇಚ್ಛಾಚಾರ, ಬಂದ ದಿನಗಳಲ್ಲಿ ಸಮೃದ್ಧ ಲಕ್ಷ್ಮಿ ಗಂಗೆ-ಯಮುನೆಯರಂತೆ ಹರಿದಳು"

"ಗಂಗೆ ಎಂದರಷ್ಟೇ ಸಾಕಲ್ಲ, ಯಮುನೆ ಏಕೆ?"

"ಗಂಗೆ ಶುಭ್ರತೆಯ ಸಂಕೇತವೆಂದು ತಿಳಿ. ಹಾಗೆ ಹರಿದುದು ವೈಟ್ ಮನಿ. ಯಮುನೆಯ ಬಣ್ಣ ಕಪ್ಪು; ಹಾಗೆ ಹರಿದುದು ಬ್ಲ್ಯಾಕ್‌ಮನಿ ಉರುಫ್ ಕಪ್ಪುಹಣ. ಗಂಗೆಯನ್ನು ಎಲ್ಲರೂ ಥಾಲಿಗಳಲ್ಲಿ ತುಂಬಿಕೊಳ್ಳುತ್ತಾರೆ. ಅದು ಲೆಕ್ಕಕ್ಕುಂಟು. ಯಮುನೆಯ ನೀರು ಎಲ್ಲ ಕಾಲಕ್ಕೂ ಬೇಕು; ಆದರೆ ಹೆಸರು ಹೇಳುವುದಿಲ್ಲ. ಕಪ್ಪುಹಣವೇ ಹಾಗೆ. ಸಭ್ಯ ನಾಗರಿಕನ ಚಪಲದಂತೆ - ಒಳಗೆ ಇರುತ್ತದೆ, ಹೊರಗೆ ವ್ಯಕ್ತವಾಗುವುದಿಲ್ಲ"

"ಆಚಾರ್ಯರೆ, ವಿಷಯಾಂತರವಾಯಿತು"

"ಬೆಂಗಳೂರಿನ ಗುಣವಯ್ಯಾ. ಮೇಯ್‌ನ್‌ರೋಡಿನಲ್ಲಿ ಟ್ರಾಫಿಕ್ಕು, ಹಂಪು, ಹಳ್ಳ ತಪ್ಪಿಸಿ ಅಡ್ಡದಾರಿ, ಐ ಮೀನ್, ಕ್ರಾಸ್ ರೋಡ್ ಹಿಡಿದಂತೆ, ಮಾತೂ ಪಥ ಮೀರಿತು. ಹಾಂ. ಆ ಸ್ವಿಸ್ ಬ್ಯಾಂಕಮ್ಮಳು ನಿಜಕ್ಕೂ ಮಹಾನ್ ತಾಯಿ. ಬಳಿಬಂದ ಎಲ್ಲ ಲಕ್ಷ್ಮಿಯರನ್ನೂ ಏಕಭಾವದಿಂದ ನೋಡುತ್ತಾ ಮಡಿಲಿಗೆ ಏರಿಸಿಕೊಳ್ಳುವಳು. ವಿಶ್ವದೆಲ್ಲೆಡೆಯ ಕಪ್ಪುಲಕ್ಷ್ಮಿಗೆ ಇದೇ ತವರುಮನೆ ಎಂದು ತಿಳಿ."

"ಈ ಕಪ್ಪುಲಕ್ಷ್ಮಿಯನ್ನು ಒಲಿಸಿಕೊಳ್ಳುವುದು ಹೇಗೆ?"

"ತೊಗೊ ಈ ಸ್ತೋತ್ರವನ್ನು. ಇದನ್ನು ದಿನವೂ ನಾಲ್ಕು ಬಾರಿ ರಾಗಬದ್ಧವಾಗಿ ಹಾಡಿಕೋ"

ಸೀನು ಕಾಗದ ಬಿಡಿಸಿ ನೋಡಿದ. ಮೇಲೆ ದಪ್ಪಕ್ಷರಗಳಲ್ಲಿ ಶ್ರೀ ಕೃಷ್ಣಲಕ್ಷ್ಮೀ ಸ್ತೋತ್ರಂ ಎಂದು ಬರೆದಿತ್ತು. ನಂತರ

ಕಪ್ಪನೆ ಲಕ್ಷ್ಮೀ ಬಾರಮ್ಮ ದೊಡ್ಡಮ್ಮ ನೀ ಗೌಪ್ಯದ ಲಕ್ಷ್ಮೀ ಬಾರಮ್ಮ ॥
ಪಬ್ಬು ಬಾರ್‌ಗಳ ಧಣಿಯ ಸೇರುತ ಕಟ್ಟಿನ ಮೇಲೆ ಕಟ್ಟನು ಹೇರುತ
ಸ್ವಜನ ಪಾರ್ಟಿ ಮಾಡುವ ವೇಳೆಗೆ ಕಾರ್ಕನು ಚಿಮ್ಮಿದ ಶಾಂಪೇನಂತೆ...
ಕಪ್ಪನೆ ಲಕ್ಷ್ಮೀ ಬಾರಮ್ಮ.... ॥
ಲೆಕ್ಕವಿಲ್ಲದೆ ರಾಶಿಯ ಕೊಟ್ಟು ತೆಂಕಣ ಕೈಯ ಹಿಡಿಯಲು ಬಾರೆ
ಕಪ್ಪು ಮಾರ್ಕಿತೆ ಕಶ್ಮಲಲೋಚನೆ ಸಂಕಟರಮಣನ ಪರಿಹರ ರಾಣಿ
ಕಪ್ಪನೆ ಲಕ್ಷ್ಮೀ ಬಾರಮ್ಮ.... ॥

ಮುಂದಿನ ಪುಟ ನೋಡಿ

...

ಕನಕವೃಷ್ಟಿಯ ಕರೆಯುತ ಬಾರೆ ಷೇರ್ಮಾರ್ಕೆಟ್‌ನ ಸಿದ್ಧಿಯ ತೋರೆ
ದಿನ ಕರ ತಪ್ಪಿಸಿ ವೇಗದಿ ಬೆಳೆವ ಕುಟಿಲ ಮನುಜರ ಮೆಚ್ಚಿನ ದೇವಿ
ಕಪ್ಪನೆ ಲಕ್ಷ್ಮೀ ಬಾರಮ್ಮ.... ||
ಸಿಕ್ಕರು ಲಂಚದ ಕಾಲುವೆ ಹರಿಸಿ ರೈಡು ಸ್ಕ್ಯಾಮನು ಮೀರುತ ಹಾರೆ
ಸ್ವಿಸ್ಸಕೌಂಟಲಿ ರಾಜಿತೆ ಭೂಷಿತೆ ಕಳ್ಳಹಾದಿಯ ಬಿಂಕದ ರಾಣಿ
ಕಪ್ಪನೆ ಲಕ್ಷ್ಮೀ ಬಾರಮ್ಮ... ||

ಎಂಬ ಗೀತೆ ಇತ್ತು.

“ಕೆಲವು ಪದಗಳು ಅರ್ಥವಾಗಲಿಲ್ಲ ಗುರುಗಳೆ...”

“ಅನರ್ಥಕ್ಕೆಂತದಯ್ಯ ಅರ್ಥ? ಇರಲಿ, ಕೇಳು”

“ತೆಂಕಣ ಕೈ ಎಂದರೆ ಏನು?”

“ಈಗ ಬ್ಲ್ಯಾಕ್‌ಮನಿ ಇರೋದು ಹೆಚ್ಚಾಗಿ ಉತ್ತರಭಾರತದಲ್ಲೇ. ಮೊದ್ದಿನಂಥ ಮಗನ ಚಿನ್ನದಂಥ ರಾಣಿಯೊಬ್ಬಳು ಈ ಲಕ್ಷ್ಮಿಯ ಪರಮ ಭಕ್ತೆ. ಅಲ್ಲದೆ ಮಿನಿ, ಮೈಕ್ರೋಮಿನಿ ದಾಸಿಯರಾದ ನಟಿಯರು, ಅವರ ವಂದಿಮಾಗಧರಾದ ನಟರೆಲ್ಲರೂ ಈಕೆಯ ಭಕ್ತವೃಂದದ ಮುಕುಟಮಣಿಗಳು. ದಕ್ಷಿಣಭಾರತದಲ್ಲಿ ತಾಯಿ ಎಂದೇ ಪ್ರಖ್ಯಾತಳಾದವಳು, ಕರುನಾಡಿನ ಕೆಲವು ಬಿಳಿಯ ಹುಲಿಗಳು ತಕ್ಕಮಟ್ಟಿಗೆ ಈ ಲಕ್ಷ್ಮಿಯ ಆರಾಧನೆ ಮಾಡಿದ್ದರೂ, ಈ ತಾಯಿ ಇನ್ನೂ ದಕ್ಷಿಣಭಾರತದವರಿಗೆ ಅಷ್ಟು ಒಲಿದಿಲ್ಲ. ತೆಂಕಣ ಎಂದರೆ ದಕ್ಷಿಣ. ದಕ್ಷಣದಲ್ಲೂ ಆಕೆಯ ಸಾಮ್ರಾಜ್ಯ ಸ್ಥಾಪನೆಯಾಗಿ ನೀನೂ ಅದರ ಪ್ರಜೆಯಾಗು ಎನ್ನುವುದೇ ಇದರ ಆಶಯ”

“ಕಪ್ಪುಮಾರ್ಕಿತೆ?”

“ಕೃಷ್ಣನ ಲೆಕ್ಕ”

“ಕೃಷ್ಣಲಕ್ಷ್ಮೀ ಎಂದರೆ?”

“ಸಂಸ್ಕೃತದಲ್ಲಿ ಕೃಷ್ಣ ಎಂದರೆ ಕಪ್ಪು.”

“ಕಶ್ಮಲಲೋಚನೆ?”

“ಎರಡು ಅರ್ಥ. ಸಮ್ಮತವಲ್ಲದ ಮಾರ್ಗದಲ್ಲೇ ದೃಷ್ಟಿ ಹಾಯಿಸುವುದರಿಂದ ಕಶ್ಮಲ ಲೋಚನೆ; ದೃಷ್ಟಿಯಲ್ಲೇ ಅಕೌಂಟ್ ತಪ್ಪಿಸಬೇಕೆಂಬ ಹುನ್ನಾರ ಕಾಣುವುದರಿಂದಲೂ ಕಶ್ಮಲಲೋಚನೆ”

“ಸಂಕಟರಮಣ?”

“ನೀನೇ. ಹೆಂಡತಿ ಕೇಳಿದ್ದನ್ನು ಸಂಬಳದಲ್ಲಿ ಕೊಡಿಸಲು ಸಾಧ್ಯವೇನಯ್ಯ? ಮಾರ್ಕೆಟಿಂಗ್‌ನಲ್ಲಿ ಮಾರ್ಪಾಡು ಮಾಡಿ, ಕೆಟ್ಟ ಸಂಪಾದನೆ ಮಾಡುವುದೇ ಮಾರ್ಕೆಟಿಂಗ್ ಸೂತ್ರವನ್ನಾಗಿಸಿಕೋ. ತನ್ಮೂಲಕ ಒಲಿದ ಬ್ಲ್ಯಾಕ್ ಲಕ್ಷ್ಮಿಯೇ ನಿನ್ನ ಸಂಕಟ ಹರಿಸಲು ಸಾಧ್ಯ. ಆದ್ದರಿಂದಲೇ ಸಂಕಟರಮಣನ, ಅರ್ಥಾತ್ ಸಂಕಟದಲ್ಲಿರುವ ಗಂಡನ ಪರಿಹಾರಕ್ಕೆ ಒದಗುವ ರಾಣಿ ಎಂದದ್ದು.”

“ಈ ವ್ರತವನ್ನು ಮಾಡುವ ಪರಿ ಹೇಗೆ?”

“ಎಲ್ಲವನ್ನೂ ವಿಳಂಬಕಾಲದಲ್ಲಿ ಮಾಡು. ಕಲಿಯುಗದಲಿ hurry, ನಾಮವ ನೆನೆದರೆ ಕುಲಕೋಟಿಗಳು ಉದ್ಧರಿಸುವುದು ಎಂದು ತಿಳಿದಿಲ್ಲವೆ?”

“ನನಗೆ ತಿಳಿದಿರುವುದು ನೇರ ಅರ್ಥ; ನಿಮ್ಮ ಅಂತರಾರ್ಥವೇನು ಗುರುವರ್ಯ?”

“hurry, ಅರ್ಥಾತ್ ಆತುರದಲ್ಲಿ ಇರುವವರು ಕೊಡುಗೈದೊರೆಗಳು. ಬಸವನಹುಳುವನ್ನು ನಿನ್ನ ಮನೆ ದೇವರಾಗಿಸಿಕೋ. ಅದರಷ್ಟೇ ಮಂದಗತಿಯಲ್ಲಿ ನಿನ್ನ ಕೆಲಸ ಸಾಗಲಿ. ಕೆಲಸ ನಿಧಾನ ಮಾಡಿದಷ್ಟೂ ಹೆಚ್ಚು ಹಣ ಹರಿದುಬರುತ್ತದೆ. ಅನಗತ್ಯವಾಗಿ ತಕ್ಷಣ ಕೆಲಸ ಮಾಡಿಕೊಟ್ಟು ನಿನ್ನ ಭವಿಷ್ಯಕ್ಕೆ ನೀನೇ ಸಂಚಕಾರ ತಂದುಕೊಳ್ಳಬೇಡ. ಬುದ್ಧಿಯಿಲ್ಲದವರು, ಧೈರ್ಯವಿಲ್ಲದವರಿಂದ ಹಣ ಪಡೆದು ನಾಮ ಹಾಕು. ಇದೇ ಈ ವ್ರತದ ಮೂಲಮಂತ್ರ.”

“ಈ ಮಂತ್ರವನ್ನು ಯಾರು ಆಚರಿಸಬಹುದು?”

“ಅಧಿಕಾರದಲ್ಲಿ ಕೈ ಮೇಲೆ, ಟೇಬಲ್ಲಿನ ಮಟ್ಟದಲ್ಲಿ ಕೈ ಕೆಳಗೆ ಇರುವ ಎಲ್ಲರೂ ಈ ವ್ರತವನ್ನು ಆಚರಿಸಬಹುದು.”

“ಈ ವ್ರತ ಮಾಡುವಾಗ ನಿಷಿದ್ಧವಾದುದು ಏನಾದರೂ ಇದೆಯೆ?”

“ಹಾಂ. ಈ ದೇವಿಗೆ ಸಿಸಿಕ್ಯಾಮರೆ ಎಂದರೆ ಮೈಲಿಗೆ. ಅದು ಇರುವ ಕಟ್ಟಡದಲ್ಲಿ ಈ ವ್ರತ ವರ್ಜ್ಯ. ಇಂದಿನಿಂದಲೇ ಈ ವ್ರತ ಆರಂಭಿಸು. ಗುರುದಕ್ಷಿಣೆ ಎಂದು ಐದು ಸಾವಿರವನ್ನು ರಸೀದಿ ಕೇಳದೆ ನಗದು ರೂಪದಲ್ಲಿ ತಂದಿಡು”

ಸೀನು ಅಂತೆಯೇ ಮಾಡಿದ. ಅಂದಿನ ಬಾಡಿಗೆಮನೆಯಿಂದ ಇಂದಿನ ಮಲ್ಟಿಸ್ಟೋರಿ ಬಂಗಲೆಗೆ ಬರಲು ಈ ವ್ರತದ ಮಹಿಮೆಯೇ ಕಾರಣ.

ತಡವೇಕೆ... ನೀವೂ ಆರಂಭಿಸಿ...

ಭಜ ಬ್ಲ್ಯಾಕ್ ಲಕ್ಷ್ಮಿಂ; ಭಜ ಟ್ಯಾಕ್ಸ್‌ರಹಿತಾಂ..... ▪



ವಿಚಾರ ವಿಹಾರ

ಮಾಲು, ಅಡಿಲೈಡ್

'ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನ ದಿನವು ಹೇ ದೇವ ದೇವ'

ಈ ಮೇಲಿನ ಸಾಲುಗಳು ಶ್ರೀ ಕುವೆಂಪುರವರ ಒಂದು ಕವಿತೆಯಿಂದ ಆಯ್ದದ್ದು. ದೇಹವೆಂಬುದು ದೇವಸ್ಥಾನ. ಆ ದೇವಸ್ಥಾನದಲ್ಲಿರುವವನು ದೇವನು ಅಥವಾ ಆತ್ಮನು. ನಮ್ಮ ಈ ದೇಹವೆಂಬ ದೇವಸ್ಥಾನವನ್ನು ಶುಚಿಯಾಗಿ ಇಡಬೇಕು. ರಾಜಸಿಕ ಆಹಾರಗಳಿಂದ, ರಾಜಸಿಕ ತಾಮಸಿಕ ಪಾನಿಯಗಳಿಂದ ರಾಜಸಿಕ ತಾಮಸಿಕ ನಡವಳಿಕೆಯಿಂದ ನಮ್ಮ ಈ ದೇವಸ್ಥಾನ ಕೆಡುತ್ತದೆ. ಕ್ರೋಧ, ದ್ವೇಷ, ಲೋಭ ಮೊದಲಾದವುಗಳಿಂದ ನಿದ್ರಾ ಆಲಸ್ಯ ಪ್ರಮಾದ ಇವುಗಳಿಂದ ಈ ದೇವಾಲಯಕ್ಕೆ ಧಕ್ಕೆ ಉಂಟಾಗುತ್ತದೆ. ದ್ವೇಷ ಅಸೂಯೆ ಮತ್ತು ಲೋಭದಿಂದ ಉಂಟಾದ ಕೋಪ ದೇವಾಲಯನ್ನು ಅಲುಗಾಡಿಸುತ್ತದೆ.

ಒಳಗುಡಿ

ಮನೆಯನ್ನು ಹೇಗೆ ದಿನವೂ ಗುಡಿಸುತ್ತೇವೆಯೋ ಹಾಗೆಯೇ ನಮ್ಮ ದೇಹದ ದೇವಸ್ಥಾನವನ್ನು ಅಧ್ಯಾತ್ಮ, ಆತ್ಮವಿಶ್ವಾಸ ಮತ್ತು ಸುಸಂಸ್ಕಾರದ ಪೊರಕೆಯಿಂದ ನಮ್ಮಲ್ಲಿ ಉಂಟಾದ ಅಸಹನೀಯ ವರ್ತನೆಗಳನ್ನು ದಿನವೂ ಗುಡಿಸಬೇಕು. ದೇಹವೆಂಬ ಈ ಅಸ್ತಿಪಂಜರ ನಿಜವಾದ ಹಸ್ತಿನಾಪುರ. ನಮ್ಮ ಅಜ್ಞಾನವೇ ಈ ನಗರದ ಕುರುಡು ದೊರೆ ದೃತರಾಷ್ಟ್ರ ಎನ್ನುತ್ತಾರೆ ಶ್ರೀ ಜಿ.ಪಿ.ರಾಜ ರತ್ನಂ ರವರು.

ಈ ದೇಹದ ಅಸ್ತಿನಾಪುರದಲ್ಲಿ ನಮ್ಮ ಸುಜ್ಞಾನವೇ ಧರ್ಮ ರಾಜನಾದ ಯುಧಿಷ್ಠಿರ. ನಮ್ಮ ದೇಹ ಒಂದು ರಥ ಕೂಡ. ಈ ದೇಹವೆಂಬ ರಥ ಸನ್ಮಾರ್ಗದಲ್ಲಿ ನಡೆಯುವಂತಾಗಲಿ. ಸಕಲ ಕುಲ ಸಂಪನ್ನ ಶ್ರೀ ಕೃಷ್ಣ ನಮ್ಮ ದೇಹದ ರಥದ ಸಾರಥಿಯಾಗಲಿ. ಇಹಲೋಕದ ಕುರುಕ್ಷೇತ್ರದಲ್ಲಿ ಜಯಾಪಜಯಗಳು ಸಹಜ.

ಶ್ರೀಮತ್ ಭಗವತ್ ಗೀತೆಯಲ್ಲಿನ 'ಸುಖ ದುಃಖ ಸಮಾ ಕೃತ್ವಾ ಲಾಭ ಲಾಭೌ ಜಯ ಜಯೌ' ಶ್ಲೋಕದಂತೆ ಸುಖ ಮತ್ತು ದುಃಖವನ್ನು ಸಮವಾಗಿ ಸ್ವೀಕರಿಸುವ ಮನೋಸ್ಥರ್ಯವನ್ನು ಯೋಗ, ಪೂಜೆ, ದಾನ ಮತ್ತು ಧರ್ಮಗಳಿಂದ ಪಡೆಯಲು ಪ್ರಯತ್ನಿಸುವ. ಶ್ರೀ ಪುರಂದರ ದಾಸರು ಹೇಳಿದಂತೆ 'ರಾಮ ನಾಮ ಪಾಯಸಕ್ಕೆ ಶ್ರೀ ಕೃಷ್ಣ ನಾಮಸಕ್ಕರೆ' ಯನ್ನು ಬೆರೆಸಿ ನಮ್ಮ ಬಿಡುವಿನ ಸಮಯದಲ್ಲಿ ಸವಿಯುವ.

'ರಕ್ಷಂತಿ ಪುಣ್ಯಾನಿ ಪುರಾ ಕೃತಾನಿ'

ಇದು ಶ್ರೇಷ್ಠ ಸಂಸ್ಕೃತ ಕವಿ ಬರ್ತ್ರುಹರಿ ಹೇಳಿದ ಮಾತುಗಳು. ಹಿಂದೆ ಮಾಡಿದ ಪುಣ್ಯಗಳು ನಮ್ಮನ್ನು ಕಾಪಾಡುತ್ತವೆ ಎಂಬುದು ಈ ವಾಕ್ಯದ ಅರ್ಥ. ಹಿಂದೂ ಧರ್ಮವನ್ನು ನಂಬಿದವನು ಪುನರ್ಜನಮದಲ್ಲಿ ನಂಬಿಕೆಯನ್ನು ಹೊಂದಿರುತ್ತಾನೆ. ಈ ಜನಮದಲ್ಲಿ ಮಾಡಿದ ಪುಣ್ಯ ಕರ್ಮಗಳನ್ನು ಮಾಡುವ. ಈ ಪುಣ್ಯಕರ್ಮಗಳ ಫಲಗಳು ನಮ್ಮ ಮುಂದಿನ ಜನ್ಮದಲ್ಲಿ ಕಾಪಾಡಬಹುದು.

ನಮ್ಮ ದೇಹ ಐದು ಇಂದ್ರಿಯಗಳ ಕುದುರೆಯ ರಥ. 'ವಿಷಯಾನ್ ತೇಷು ಗೋಚರಾನ್'. ನಮ್ಮಲ್ಲಿರುವ ಈ ಐದು ಇಂದ್ರಿಯ ಕುದುರೆಗಳು ತಮಗೆ ಬೇಕಾದ ಕಡೆ ಓಡಲು ಪ್ರಯತ್ನಿಸುತ್ತವೆ. ಇದನ್ನು ಸುಸಂಗತಿಗಳಿಂದ ಶಕ್ತಿಯನ್ನು ಸಂಪಾದಿಸಿ ಈ ಐದು ಕುದುರೆಗಳನ್ನು ನಮ್ಮ ಹಿಡಿತದಲ್ಲಿ ಇಟ್ಟುಕೊಂಡು ನಮ್ಮ ದೈನಂದಿಕ ಜೀವನದಲ್ಲಿನ ನಮ್ಮ ದೇಹದ ರಥವನ್ನು ನಡೆಸುವ.

'ಸರ್ವೇ ಜನಾಃ ಸುಖಿನೋ ಭವಂತು' ಎಂಬುದು ನಮ್ಮ ದೇಹವೆಂಬ ದೇವಸ್ಥಾನದ ಸುಮಂತ್ರವಾಗಲಿ.
ಸಕಲರಿಗೂ ಮಂಗಳವಾಗಲಿ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಬೆಕ್ಕು ಬಾವಲಿ

ಕನಕಾಪುರ ನಾರಾಯಣ

ಮರದಿಂದ ಮರಕ್ಕೆಹಾರುತ್ತಾ ಬಾವುಲಿಯೊಂದು ನೆಲಕ್ಕೆ ಬಿದ್ದಿತು.ಹಸಿದ ಬೆಕ್ಕೊಂದು ಹತ್ತಿರದಲ್ಲೇ ಅವಿತು ಕುಳಿತಿತ್ತು.ನೆಲಕ್ಕೆ ಬಿದ್ದ ಬಾವುಲಿಯನ್ನು ಕಂಡಿತು. ಬೆಕ್ಕು ತಕ್ಷಣ ಅದರ ಮೇಲೆರಗಿತು,ಭಯಗೊಂಡ ಬಾವುಲಿ "ನನ್ನನ್ನು ಕೊಲ್ಲಬೇಡ" ಎಂದು ಬೇಡಿಕೊಂಡಿತು.ಆಗ ಬೆಕ್ಕು"ಪಕ್ಷಿಗಳು ನಮ್ಮ ಆಜನ್ಮ ಶತ್ರುಗಳು ಅವನ್ನು ನಾವೆಂದೂ ಜೀವಸಹಿತ ಬಿಡೆವು"ಎಂದಿತು.ತಕ್ಷಣ ಬಾವುಲಿ "ನಾವು ಇಲಿಗಳ ಜಾತಿಗೆ ಸೇರಿದವರು, ಪಕ್ಷಿಯಲ್ಲ" ಎಂದಿತು.ಬೆಕ್ಕು ಬಾವುಲಿಯನ್ನು ಕೊಲ್ಲದೆ ಹಾಗೇ ಬಿಟ್ಟಿತು.ಸ್ವಲ್ಪ ದಿನಗಳ ಬಳಿಕ ಮತ್ತೊಮ್ಮೆ ಆ ಬಾವುಲಿ ಹಾರಾಡುತ್ತಿರಲು ನೆಲಕ್ಕೆ ಬಿದ್ದಿತು ಆದರೆ ಈ ಬಾರಿ ಬೇರೊಂದು ಬೆಕ್ಕು ಅದನ್ನು ಹಿಡಿಯಿತು.

ಬಾವುಲಿ ಮತ್ತದೇ ರೀತಿ ಪ್ರಾಣಭಿಕ್ಷೆ ಬೇಡಿತು.ಬೆಕ್ಕು ತಾನು ಇಲಿಗಳನ್ನು ಮಾತ್ರ ತಿನ್ನುವುದು ಎಂದಿತು. ಕೂಡಲೇ ಬಾವುಲಿ ಆದರೆ ನಾನು ಇಲಿಯಲ್ಲ..... ನಾನು ಪಕ್ಷಿ ಜಾತಿಗೆ ಸೇರಿದವ" ಎಂದಿತು.ಅದನ್ನು ನಂಬಿದ ಬೆಕ್ಕು ಬಾವುಲಿಯನ್ನು ಕೊಲ್ಲದೇ ಹಾಗೇ ಬಿಟ್ಟಿತು. ಸಮಯಕ್ಕೆ ತಕ್ಕ ಉತ್ತರ ಪ್ರಾಣವನ್ನು ಉಳಿಸಿತು ▪

ರೆಸಿಪಿ ಕೊಡ್ತೀರಾ!

ನುಚ್ಚಿನುಂಡೆ

ಬೇಕಾಗುವ ಸಾಮಗ್ರಿಗಳು

- ತೊಗರಿ ಬೇಳೆ ಅರ್ಧ ಕಿಲೋ , ಕಡಲೆ ಬೇಳೆ ನೂರು ಗ್ರಾಂ
- ತೆಂಗಿನ ಕಾಯಿ ತುರಿ ಒಂದು ಲೋಟ
- ಹಸಿ ಮೆಣಸಿನ ಕಾಯಿ ಹತ್ತು, ಶುಂಟಿ ಗೋಲಿ ಗಾತ್ರ
- ಕೊತ್ತಂಬರಿ ಒಂದು ಕಂತೆ, ಐದು ಎಳಸು ಕರಿಬೇವು
- ಜೀರಿಗೆ ಒಂದು ಚಮಚ
- ಉಪ್ಪು ಒಂದೂವರೆ ಚಮಚ

ಮಾಡುವ ವಿಧಾನ

- ಬೇಳೆಗಳನ್ನು ತೊಳೆದು ನಾಲ್ಕು ಘಂಟೆ ನೆನೆಸಿ ನಂತರ ತರಿತರಿಯಾಗಿ ರುಬ್ಬಿಕೊಳ್ಳಿ
- ರುಬ್ಬಿದ ಹಿಟ್ಟಿಗೆ ತೆಂಗಿನತುರಿ,ಶುಂಟಿ,ಹ.ಮೆ.ಕಾಯಿ ಹಾಕಿ ಮತ್ತೆರುಬ್ಬಿ
- ಹೆಚ್ಚಿದ ಕೊತ್ತಂಬರಿ,ಕರಿಬೇವು,ಜೀರಿಗೆ,ಉಪ್ಪು ಸೇರಿಸಿ
- ಕೈ ಹಿಡಿಯಲ್ಲಿ ಉಂಡೆ ಮಾಡಿ ಇಡ್ಲಿಯಂತೆ ಹತ್ತು/ಹದಿನೈದು ನಿಮಿಷ ಹಬೆಯಲ್ಲಿ ಬೇಯಿಸಿ
- ಬೆಂದ ಉಂಡೆಗೆ ಬಿಸಿಯಲ್ಲೇ ತುಪ್ಪ ಸವರಿ ತಿನ್ನಲು ಕೊಡಿ ನೀವೂ ತಿನ್ನಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ಸುತ್ತಮುತ್ತ ಕಪ್ಪು ಗರಿಕೆ , ನಡುವೆಯೊಂದು ಕಪ್ಪು ಕುಡಿಕೆ

೨. ಸಾಸಿವೆ ಗಾತ್ರದ ಕಲ್ಲು ಬಿದ್ದರೆ , ಸಾವಿರ ರೂಪಾಯಿನ ತೋಟ ಹಾಳು

ಉತ್ತರಕ್ಕೆ ಪುಟ ೧೦ ನೋಡಿ

ನೆನಪು ...

ಮಲೆನಾಡಿನ ಮಳೆಗಾಲದ
ಮಿಸುಕಾಡುವ ಮುಗಿಲು
ಮನದಲ್ಲಿನ ಮೊರೆಯೆಲ್ಲವು
ಹುಸಿಯಾಗುವ ದಿಗಿಲು

ಧೋ ಎನ್ನುತ ಕೂಗುತ್ತಲೆ
ಸುರಿಯುತ್ತಿದೆ ಮಳೆಯು
ಹಾ ಎನ್ನುತ ಬೀಗುತ್ತಲೆ
ಹರಿಯುತ್ತಿಹ ಹೊಳೆಯು

ಮನೆ ಮಾಡಿನ ಮೆತು ಮೆತ್ತೆಯ
ತಿಳಿ ಬಣ್ಣದ ಹಾಸು
ಬಗಲಲ್ಲಿಯೆ ಬಿಗಿ ಹಿಡಿದಿಹ
ಹಠ ಮಾಡುವ ಕೂಸು

ಬಾ ಎಂದರು ಬರಲಾಗದ
ಮಣ್ಣಾಗಿಹ ಗೆಣೆಯ
ಅಣಕಾಡಿದೆ ಕರಿಮಣಿ ಸರ
ಕೆಂಪಿಲ್ಲದ ಹಣೆಯ

ಹಳೆ ನೆನಪನು ಮೆರೆಸುತ್ತಿಹ
ಬಿಳಿ ಗೋಡೆಯ ಚಿತ್ರ
ಅವ ಬರೆದಿಹ ಒಳ ಹಾಡಿನ
ಕೈ ಬರಹದ ಪತ್ರ

ಕೆನ್ನೆಯಮೇಲ್ ಜಾರುತ್ತಿದೆ
ಮಡುಗಟ್ಟಿದ ನೀರು
ಕಮರಿತೆ ಈ ಬಾಳಿನ ಮರ?
ಅಲುಗಾಡಿತೆ ಬೇರು

ನಾಳೆಗೆ ಇನ್ನೇನಿದೆ? ಬರಿ ನೀರಸ ಬದುಕು
ಹಾಳೆಯ ಮೇಲ್ ಬರೆಯಲು ಹೊಸಪದಗಳ ಬೆದಕು

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಭಾರತೀಯ ದೇಗುಲಗಳ ಶಿಲ್ಪಕಲೆಯ ತೊಟ್ಟಿಲು ಎಂದು ಕರೆಯಿಸಿಕೊಂಡಿರುವ ಪ್ರಸಿದ್ಧ ಪ್ರವಾಸೀ ತಾಣ ಯಾವುದು? ಇದು ಯಾವ ರಾಜವಂಶದ ಕೊಡುಗೆ? ಇದರ ಸಮೀಪದ ಮತ್ತೆರಡು ಶಿಲ್ಪಕಲೆಯ ಬೀಡಿನ ಸ್ಥಳಗಳನ್ನು ಹೆಸರಿಸಿ.

೨. ಕರ್ನಾಟಕದ ಅತ್ಯಂತ ದೊಡ್ಡ ದೇವಾಲಯ ಯಾವುದು? ಇದು ಯಾರ ಕಾಲದಲ್ಲಿ ನಿರ್ಮಿತವಾಗಿದೆ?

ಸರಿ ಉತ್ತರಕ್ಕೆ ಪುಟ ೧೩ ನೋಡಿ

ಒಗಟು – ಉತ್ತರ

೧. ಕಣ್ಣು ಗುಡ್ಡೆ ೨. ಕಣ್ಣು

ಹಾಸ್ಯ ಚಿಲುಮೆ

ಸಂಟಾ ತನ್ನ ಗೆಳತಿಗೆ ಪತ್ರ ಬರೆಯುತ್ತಿದ್ದ, ಅದನ್ನು ನೋಡಿದ ಬಂಟಾ ಕೇಳಿದ "ಏನೋ ಲೆಟರ್ ಖಾಲಿ ಇದೆ,ಯಾಕೆ ಏನೂ ಬರೆದಿಲ್ಲಾ?"

ಅದಕ್ಕೆ ಸಂಟಾ ಹೇಳಿದ " ಈ ನಡುವೆ ನಾವು ಮಾತಾಡೋದು ನಿಲ್ಲಿಸಿದ್ದೇವೆ"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಇಬ್ಬರ ನಡುವೆ ಅಂತರವಿದ್ದರೂ ಬಲ್ಲಿದನೊಡನೆ
ಇವನೂ ಸದಾ ಇರುತ್ತಾನೆ.

೨. ಅರಸರಾಗಿದ್ದರೂ ಸಂತರಿಗೆ ಸಮಾನರೆಂದು ಗೌರವದ
ಈ ಬಿರುದು ಪಡೆದಿದ್ದರು ನಾಲ್ವಡಿ ಕೃಷ್ಣರಾಜ ಒಡೆಯರು.

೩. ಚಳಿಗಾಲದಲ್ಲಿ ಮಡಕೇರಿಯ ಮೇಲೆ ಹೋಗಿ ಕುಳಿತ
ಹುಡುಗನ ಹೆಸರನ್ನು ಹೇಳಿ ನೋಡೋಣ.

೪. ಈ ಸ್ವರಗಳನ್ನು ಹಾಡುವುದು ತುಂಬಾ ಸುಲಭ.

೫.ಒತ್ತಾಯ ಮಾಡಿದ ಶಕ್ತಿಶಾಲಿ.

೬. ಸಂಪೂರ್ಣವಾಗಿ ನೆಮ್ಮದಿ. ಸಂತೋಷ ಹೊಂದಿದ ಮನುಷ್ಯ.

ಉತ್ತರ: ವಾರದಲ್ಲಿ ದಿನಕ್ಕೊಬ್ಬರಂತೆ ಮುನಿಗಳು ಸೇರಿ
ರಚಿಸಿಕೊಂಡಿರುವ ಸಭೆಯೇ ಇದು?

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಆಗಸ್ಟ್ ೩೧ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜುಲೈ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಶುಭಶ್ರೀ, ಸಿದ್ನಿ
- ಬಿ.ಆರ್.ವತ್ಸಲ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಬೆಂಗಳೂರು
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಸುಮ ಅಶೋಕ್, ಸಿದ್ನಿ
- ಪುಷ್ಪಾ ಜಗದೀಶ್, ಸಿದ್ನಿ

ಜುಲೈ ತಿಂಗಳ ಪದಪುಂಜದ ಉತ್ತರ

೧. ದೂರದಲ್ಲಿ ನಿಂತಿರುವ ಅಜ್ಜಿಯ ಸಂಗಾತಿಯನ್ನು
ಧೀರ್ಘವಾಗಿ ಕರೆಯುವುದು ಹೇಗೆ?

ಅ	ಜ್ಜಾ

೨. ಈ ಅಲಂಕಾರ ಸಾಮಗ್ರಿಯನ್ನು ತರಲು ಅರಣ್ಯಕ್ಕೇನೂ ಹೋಗಬೇಕಿಲ್ಲ.

ಕಾ	ಡಿ	ಗೆ

೩. ರೋಗ ನಿರೋಧಕ ಚುಚ್ಚುಮದ್ದು ಹಾಕಿಸಿಕೊಳ್ಳಲು
ಅದೇನು ಸೋಮಾರಿತನ?

ಅ	ಲ	ಸಿ	ಕೆ

೪.ವ್ಯವಸಾಯ ಮಾಡುವವರು ಹಿಡಿತವಾಗಿ ಮಾಡುವ ಖರ್ಚೇ ಇದು?

ಮಿ	ತ	ವ್ಯ	ಯ

೫. ಕರೆದ ಕೂಡಲೇ ಬರುತ್ತದೇನು ಈ ನೀರಿನ ಹಕ್ಕಿ?

ಕೊ	ಕ್ಕ	ರೆ

೬. ಹಸುವಿಗಾಗಿ ನಡೆದ ಯುದ್ಧ.

ಕ	ದ	ನ

ಈ ಸಾಂಪ್ರದಾಯಿಕ ಸಿಹಿತಿಂಡಿಗೂ ವ್ಯಾಪಾರಕ್ಕೂ ಬಲವಾದ ನಂಟು.

ಕಾ	ಸಿ	ಗೆ		ತ	ಕ್ಕ		ಕ	ಜ್ಜಾ	ಯ

ಉತ್ತರ: ಕಾಸಿಗೆ ತಕ್ಕ ಕಜ್ಜಾಯ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ- ದಿವ್ಯಶ್ರೀ ದ್ವಾರಕಾನಾಥ್, ಕೆ.ಜಿ.ಎಫ್. ಚುಕ್ಕೆ - 21-11

ಡಿ ಐ ವೈ

ಲೇಖಕರು:
ಸ್ಮಿತಾ ಮೇಲ್ಕೋಟೆ

ಮೈಸೂರಿನಿಂದ, ವಿದೇಶದಲ್ಲಿದ್ದ ಮಗನ ಮನೆಗೆ ಬಂದ ರಾಯರು, ಅಲ್ಲೇ ಸುತ್ತ ಮುತ್ತ ಇದ್ದ ಕೆಲವು ಇಂಡಿಯನ್ಸ್ ಗಳ ಪರಿಚಯ ಮಾಡಿಕೊಂಡು ಬೆಳಗಿನ ಹೊತ್ತು ಕಾಲ ಕಳೆಯಲು, ವಿಚಾರ ವಿನಿಮಯ ಮಾಡಿಕೊಳ್ಳಲು ಭೆಟ್ಟಿಯಾಗುತ್ತಿದ್ದರು. ಬೆಳಗ್ಗೆ ಮತ್ತು ಸಂಜೆ ವಾಕಿಂಗು ಮತ್ತು ಟಾಕಿಂಗು ಗೆಳೆಯ ಜೋಸೆಫ್ ಯಾಕೋ ಮೂರು ನಾಲ್ಕು ದಿನದಿಂದ ಕಾಣಲಿಲ್ಲ. ಮೆಸೇಜ್ ಕಳಿಸಿದರು, ನಿರುತ್ತರ. ಫೋನ್ ಮಾಡಿದರು, ಎತ್ತಲಿಲ್ಲ. ರಾಯರಿಗೆ ಸ್ವಲ್ಪ ಗಾಭರಿಯೇ ಆಯಿತು. ಜೋಸೆಫ್ ವಯಸ್ಸು ಕೂಡ ಎಪ್ಪತ್ತರ ಮೇಲೆ ಇರಬೇಕು . ಆರೋಗ್ಯಕ್ಕೆ ಏನಾಯಿತೋ ಏನೋ ಎಂದು ಮನೆಗೇ ಹೋಗಿ ನೋಡೋಣ ಎಂದು ಯೋಚನೆ ಮಾಡಿ, ಮರುದಿನ ಮಗ ಸೊಸೆ ಕೆಲಸಕ್ಕೆ ಹೊರಟ ಬಳಿಕ, ತಾವು ರೆಡಿ ಆಗಿ ಜೋಸೆಫ್ ಮನೆ ಕದ ಬಡಿದೇ ಬಿಟ್ಟರು. ಬೆಲ್ ಒತ್ತಿ, ಕೊಂಚ ಸಮಯ ಹೊರಗಡೆ ನಿಂತು ಕಾಯುವಾಗ, ರಾಯರ ಹೃದಯವೂ ಕೂಡ ಕಾಲಿಂಗ್ ಬೆಲ್ನಷ್ಟೇ ಜೋರಾಗಿ ಸದ್ದು ಮಾಡುತಿತ್ತು.

ಐದು ಹತ್ತು ನಿಮಿಷ ಕಾದ ಮೇಲೆ, ನಿಧಾನವಾಗಿ ಬಾಗಿಲು ತೆರೆಯಿತು. ರಾಯರಿಗೋ ತವಕ. ಆಚೆ ಬಂದ ಗೆಳೆಯ ಜೋಸೆಫ್ ಕಂಡು, ರಾಯರಿಗೆ ಹೇಳಿಕೊಳ್ಳಲಾಗದ ಸಂತೋಷ. ಆನಂದದಲ್ಲಿ ಗೆಳೆಯನನ್ನು ಅಪ್ಪಿ, ಅಬ್ಬಾ ಸಧ್ಯ ಅಂತ ನಿಟ್ಟುಸಿರುಬ್ಬರು.

ಆಶ್ಚರ್ಯವಾಗಿ ಜೋಸೆಫ್, ಏನು ರಾಯರು ಮನೆ ಕಡೆ ಅಂತ ಕೇಳಿದ್ರೆ, ಅಬ್ಬಾ ನಿಮ್ಮನ್ನ ಯಾವಾಗ ನೋಡುತ್ತೀನೋ ಅನ್ನಿಸಿತ್ತು .. ಯಾಕೋ ನೀವು ಮೂರು ನಾಲಕ್ಕು ದಿನ ಆಚೆ ಕಾಣಿಸಲಿಲ್ಲ, ಮಾತಾಡಿಸಿ ಕೊಂಡು ಹೋಗೋಣವೆಂದು ಬಂದೆ.

ಜೋಸೆಫ್ ಆಗ, ರಾಯರಿಗೆ ಬನ್ನಿ ಬನ್ನಿ ಒಳಗೆ ಕೂತು ಮಾತ್ನಾಡೋಣ. ಎಲ್ಲಾ ನಿಧಾನವಾಗಿ ಹೇಳ್ತೀನಿ. ನನ್ನ ಮಗಳು ಹೊಸ ಮನೆ ಕಟ್ಟಿಸಿರುವ ವಿಚಾರ ಹೇಳಿದ್ನಲ್ಲ. ಅದಕ್ಕೆ ಬೇಕಾದ ಫರ್ನಿಚರ್ಗಳನ್ನು ಕೊಂಡು ತಂದಿದ್ದೇವೆ.. ಈ ಕೆಲಸದ ಮೇಲೆ ಸ್ವಲ್ಪ ಬಿಜಿ ಅಷ್ಟೇ. ರಾಯರಿಗೆ ಕೂಡ ತಮ್ಮ ಮನೆ ನೆನಪಾಯಿತು . ಮಗಳು ಅಳಿಯ ಕೊಂಡು ತಂದ ಕಂಪ್ಯೂಟರ್ ಟೇಬಲ್ ಜೋಡಿಸಲು ಹರ ಸಾಹಸ ಮಾಡುತ್ತಿದ್ದಾರೆ. ಅಂಗಡಿಯವರು ಹಲಗೆಗಳನ್ನು , ಅದಕ್ಕೆ ಬೇಕಾದ ಬೋಲ್ಟು ನಟ್ಟುಗಳು, ಚಿತ್ರ , ವಿಧಾನ ಕೂಲಂಕಷವಾಗಿ ಪ್ರಿಂಟ್ ಮಾಡಿ ಕೊಟ್ಟು ಬಿಡುತ್ತಾರೆ. ಮನೆಗೆ ತಂದ ಹೊಸ ಟೇಬಲ್ , ಟೇಬಲ್ ಆಗಿ ಉಪಯೋಗಕ್ಕೆ ಬರಬೇಕಾದರೆ ಗಂಟೆ ಗಟ್ಟಲೆ ನಾವೇ puzzle ಬಿಡಿಸುವ ಹಾಗೆ ಬಿಡಿಸಬೇಕು. ಅದಕ್ಕೆ ಈ ದೇಶದಲ್ಲಿ DIY ಅಂತ ಕರೀತಾರೆ ಅಲ್ವೇ ಜೋಸೆಫ್ ಎಂದು ರಾಯರು ಕೇಳಿದರು.

ಜೋಸೆಫ್ ಹೌದು ರಾಯರೇ, ಇಲ್ಲಿ ಕೆಲಸಕ್ಕೆ ಜನ ಬರೋದು ಕಡಿಮೆ. ನಮ್ಮ ನಮ್ಮ ಕೆಲಸ ನಾವೇ ಮಾಡಿಕೊಳ್ಳುತ್ತೀವಿ. ಮನೆ ಕೆಲಸ, ತೋಟದ ಕೆಲಸ , ನಲ್ಲಿ ರಿಪೇರಿ ಕೂಡ ಕಲಿತಿರಬೇಕು. ಕೆಲಸದ ಸಹಾಯಕ್ಕೆ ಜನ ಬೇಕು ಅಂದ್ರೆ ಒಂದಕ್ಕೆ ಎರಡಷ್ಟು ದುಡ್ಡು ಕೊಟ್ಟು ಪಡೀಬೇಕು. ಅದಕ್ಕೆ ನಾವೇ ಎಲ್ಲ ರೌಂಡರ್ ಆಗಿ ಬಿಟ್ಟರೆ ಒಳ್ಳೇದು ನೋಡಿ.

ರಾಯರಿಗೆ ತಮ್ಮ ದೇಶದಲ್ಲಿ, ಕಾಲಿಗೊಂದು, ಕೈಗೊಂದು ಸಹಾಯಕರನ್ನು ಇಟ್ಟುಕೊಂಡು ಸೋಮಾರಿಯಾಗಿ ಕಾಲ ಕಳೆಯುವವರ ನೆನಪು ಬಂತು. ಇಲ್ಲಿ ಕೆಸದವರಿಗೆ ಸಿಗುವ ಮರ್ಯಾದೆ ಕೂಡ ಬಹು ದೊಡ್ಡದು. ಅದು ನಮ್ಮ ದೇಶದಲ್ಲಿ ಕೊರತೆಯಾಗಿ ಕಾಡುತ್ತೆ ಎಂದು ರಾಯರು ತಮ್ಮ ಅಸಮಾಧಾನ ತೋಡಿಕೊಂಡರು.

ಅದು ಸರಿ ಜೋಸೆಫ್ ನೀವೇಕೆ ಮನೆಯಲ್ಲಿಯೇ ಇದ್ದೀರಿ, ಅಂತ DIY ಪ್ರಾಜೆಕ್ಟ್ ಏನಪ್ಪಾ ಎಂದು ಕುತೂಹಲ ವ್ಯಕ್ತ ಪಡಿಸಿದರು ರಾಯರು. ಹೊಸ costco ಸೂಪರ್ ಮಾರ್ಕೆಟ್ ಇಲ್ಲಿ ನಮ್ಮ ಮನೆ ಹತ್ತಿರ ಓಪನ್ ಆಗಿದ್ದು ಗೊತ್ತು ತಾನೇ? ಅಲ್ಲಿ ಪಿನ್ ನಿಂದ ಹಿಡಿದು ಪ್ಲೇನ್ ತನಕ ಮಾರೋ ವಿಷಯ ಜಗಜ್ಜಾಹಿರ ಅಲ್ವೇ. ಹೀಗೆ ಹೋದ ವಾರ ಶಾಪಿಂಗ್ ಹೋದಾಗ ಹೊಸ ವಸ್ತುವೊಂದ್ ಕಣ್ಣಿಗೆ ಬಿಟ್ಟು ರಾಯರೇ. ಅದು ನನಗೆ ಕೊನೆಗಾಲ ಕ್ಕೆ ಬೇಕಾಗುತ್ತೆ ಎಂದು ನಾನೇ ಖುದ್ದಾಗಿ ಕೊಂಡು ತಂದಿದ್ದೇನೆ. ಅದರ ಜೋಡಿಸೋ ಕೆಲಸ ಭರದಿಂದ ನಡೀತಿದೆ.

ರಾಯರಿಗೆ ಏನ್ರೀ ಜೋಸೆಫ್ ಎಷ್ಟು ಸಸ್ಪೆನ್ಸ್ ಮಾಡ್ತಾ ಇದ್ದೀರಾ. ಬೇಗ ಹೇಳಿ ಏನಂಥ ಪ್ರಾಡಕ್ಟ್ ನಿಮ್ಮನ್ನು ಅಷ್ಟು ಗಟ್ಟಿಯಾಗಿ ಮನೆಯಲ್ಲಿ ಬಂದಿಯಾಗಿಸಿದೆ ? ಜೋಸೆಫ್ ತಮ್ಮ ನೆಲಮಾಳಿಗೆಯಲ್ಲಿದ್ದ ವರ್ಕ್ ಶಾಪ್ ಗೆ ಕರೆದೊಯ್ದರು ರಾಯರನ್ನು. ಅಲ್ಲಿ ಕಂಡ ದೃಶ್ಯ ರಾಯರನ್ನು ಮೂಕನನ್ನಾಗಿಸಿತು.

ಜೋಸೆಫ್ ಸೂಪರ್ ಮಾರ್ಕೆಟ್ ನಿಂದ " Coffin' ತಂದು, ಜೋಡಿಸುತ್ತಿದ್ದರು. ಸಾವಿನ ತಯಾರಿ ಕೂಡ ಉತ್ಸಾಹದಿಂದ ಮಾಡುತಿದ್ದ ಜೋಸೆಫ್ ಮೇಲೆ ನನ್ನ ಗೌರವ ಹೆಚ್ಚಿತು. ▪

ನೀವು ಮಾಡಿ

ರಾಕೆಟ್ ಸೈನ್ಸ್ !

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ



- ಉದ್ದಕ್ಕೆ ಉದಬಹುದಾದ ಬಲೂನ್
- ೧೦-೧೫ ಅಡಿ ಉದ್ದದಷ್ಟು ಟ್ವೈನ್ ದಾರ
- ಒಂದು ಪ್ಲಾಸ್ಟಿಕ್ ಸ್ಟ್ರಾ
- ಅಂಟಿಸಲು ಸೆಲ್ಲೋಟೇಪ್

ವಿಧಾನ

- ದಾರವನ್ನು ಸ್ಟ್ರಾ ಒಳಗೆ ತೂರಿಸಿ ಎರಡು ಚೇರ್ ಗಳ ನಡುವೆ ದಾರವನ್ನು ಕಟ್ಟಿ
- ಬಲೂನ್ ಅನ್ನು ಸಾಕಷ್ಟು ಉದಿ ಗಾಳಿ ಹೋಗದಂತೆ ಅದರ ತುದಿ ಹಿಡಿದುಕೊಂಡು ಸೆಲ್ಲೋ ಟೇಪ್ ಉಪಯೋಗಿಸಿ ಚಿತ್ರದಲ್ಲಿ ತೋರಿಸಿದಂತೆ ಸ್ಟ್ರಾ ಗೆ ಅಂಟಿಸಬೇಕು
- ಬಲೂನ್ ತುದಿ ಬಿಡುತ್ತಿದ್ದಂತೆ ರಭಸವಾಗಿ ಬಲೂನ್ ಮುಂದೆ ಚಲಿಸುತ್ತದೆ

ಏನಾಗುತ್ತಿದೆ

ಗಾಳಿಯು ಬಲೂನ್ ಒಳಗೆ ಒತ್ತಡದಿಂದ ಇರುತ್ತದೆ. ಬಲೂನ್ ತುದಿಯನ್ನು ಬಿಟ್ಟ ತಕ್ಷಣ ಇಡೀ ಗಾಳಿ ಒಮ್ಮೆಗೆ ಹೊರಬರಲು ಪ್ರಯತ್ನಿಸಿ ಮುಂಚಲನೆಯನ್ನು ಸೃಷ್ಟಿಸುತ್ತದೆ. ವಿಭಿನ್ನ ಗಾತ್ರದ ಮತ್ತು ಆಕಾರಗಳ ಬಲೂನ್ ಹೆಚ್ಚು ಅಥವಾ ಕಡಿಮೆ ಒತ್ತಡವನ್ನು ರಚಿಸುತ್ತದೆ. ನಿಜವಾದ ರಾಕೆಟ್ ನಲ್ಲಿ ಇಂಧನವನ್ನು ಉರಿಸಿ ಅದರಿಂದ ಒತ್ತಡ ಸೃಷ್ಟಿಸಿಲಾಗುತ್ತದೆ. ಈ ಒತ್ತಡವನ್ನು ಕೆಳಮುಖವಾಗಿ ಹೊರಹೋಗುವಂತೆ ರಚಿಸಿರುವುದರಿಂದ ರಾಕೆಟ್ ಮೇಲಕ್ಕೆ ಹೋಗುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಐಹೊಳೆ, ಬಾದಾಮಿಯ ಚಾಲುಕ್ಯರು, ಬಾದಾಮಿ, ಪಟ್ಟದಕಲ್ಲು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಗಣೇಶೋತ್ಸವ - ೨೦೧೬

September 10th and 11th 2016

Whitlam Leisure Centre, Wood Park
Memorial avenue, Liverpool NSW 2170

http://www.friendsofindia.com.au/ganeshotsava/in-pede-mi-aliquet-sit-amet-eu-ismod-inauctor-ut-ligula/

ಕೃಷ್ಣ ಜನ್ಮಾಷ್ಟಮಿ 2016

೨೫ ಆಗಸ್ಟ್ ೨೦೧೬

Sri Mandir the First Hindu Temple ,
286 Cumberland Road, Auburn NSW 2144.

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.